[illegible] ಶೈಲಿಯಲ್ಲಿ ಸಣ್ಣಪುಟ್ಟ ಬದಲಾವಣೆಯಿಂದ 14 ದಿನಗಳ ಶಿಬಿರದಲ್ಲಿರುವ ಮಕ್ಕಳಲ್ಲಿ ಸರಾಸರಿ 400 ಗ್ರಾಂ ತೂಕ ಹೆಚ್ಚಿದೆ ಎನ್ನುತ್ತಾರೆ ಗದಗ ಸಹಾಯಕ ಶಿಶು ಅಭಿವೃದ್ಧಿ ಅಧಿಕಾರಿ [illegible] ವಿವಿಧ ಬಗೆಯ ಅಡುಗೆಗಳ ಬಗ್ಗೆ ತರಬೇತಿ ನೀಡಲಾಗಿದೆ. ಮಕ್ಕಳ ಮಾನಸಿಕ ಸ್ಥಿತಿ ಮತ್ತು ಆಹಾರ ಒದಗಿಸುವ ರೀತಿಯನ್ನು ಮನದಟ್ಟು ಮಾಡಲಾಗಿದೆ.

# ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ



**ಹಳ್ಳಿಯ ಸಂದೇಶ ನ್ಯೂಸ್**

ತಾಳಿಕೋಟೆ: ಮುದ್ದೇಬಿಹಾಳ ತಾಲ್ಲೂಕಿನ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆಯ ತಾಲೂಕು ತರಬೇತಿ ಕೇಂದ್ರದಲ್ಲಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು ಶ್ರೀ ಸೋಮನಗೌಡ ಬಿರಾದಾರ (ಕವಡಿಮಟ್ಟಿ) ಇವರ ಅಧ್ಯಕ್ಷತೆಯಲ್ಲಿ ಇಂದು ಗುರುವಾರ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರು ಡಿ.ಬಿ.ವಡವಡಗಿ, ಸಂಗಮ್ಮ ದೇವರಳ್ಳಿ, ಸಹನಾ ಬಡಿಗೇರ, ಚೇರಮನ್ನರಾದ ಎಸ್. ಎಸ್.ಹೂಗಾರ, ಕ್ಷೇತ್ರ ಸಮನ್ವಯಾಧಿಕಾರಿಗಳು ಯು.ಬಿ.ಧರಿಕಾರ, ಕ್ಷೇತ್ರ ದೈಹಿಕ ಶಿಕ್ಷಣ ಪರೀವಿಕ್ಷಕರು ಆರ್.ಆರ್.ಚವ್ಹಾಣ, ಖಜಾಂಚಿ ಜಿ.ಎನ್.ಹೂಗಾರ, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್. ಚವ್ಹಾಣ ಹಾಗೂ ಸ್ಕೌಟ್ ಮಾಸ್ಟರ್ಸ್ ಎಲ್. ಕೆ.ನದಾಫ, ವಿ.ಎಲ್.ಘಾಟಿಗೆ, ಎಸ್.ಆರ್ ಸುಲ್ಪಿ, ಎಸ್.ಡಿ.ಕೆಳಗಿನಮನಿ, ಎ.ಸಿ.ಕೆರೂರ ಹಾಗೂ ಗೈಡ್ ಕ್ಯಾಪ್ಟನ್ಸ್ ಎಸ್.ಜಿ. ಮುತ್ತಪ್ಪನವರ, ವಿ.ವಿ.ಮಾಲಿ ಪಾಟೀಲ, ಎಸ್.ಬಿ.ಗೊಂಗಡಿ, ಎ.ಎಮ್.ನದಾಫ, ರೋವರ್ಸ್ ಕುಮಾರ ಮಲ್ಲಿ ಕಾರ್ಜುನ ಬಿರಾದಾರ, ಮೌನೇಶರವರು ಭಾಗ ವಹಿಸಿದ್ದರು. ಸುಮಾರು 45 ಕ್ಕೂ ಹೆಚ್ಚು ಸಸಿಗಳನ್ನು ನೆಡಲಾಯಿತು.

**M.G.V.C ARTS, COMMERCE AND SCIENCE COLLEGE, MUDDEBIHAL**

**PRESS CLUB (PAPER CUTTINGS)**

The first day will have exams with OMR sheets to the doorsteps be conducted in 179 centres.

# 'Job of Scouts & Guides in proper conduct of SSLC exam is vital'

**Bijapur Mirror:**



MUDDEBIHAL; 08 July: Noting that the role of Scouts and Guides is importance for the proper management of SSLC exams in the district, Block Education Officer, V. Y. Jevargi has urged the Scouts and Guides staff to attend the exam duty without fail.

Chairing the preparatory meeting of Staff of Scouts and Guides for the coming exam, he said that the Education Minister himself has asked to use the services of Scouts and Guides for the smooth conduct of SSLC exams.

He said that last time also, they did their job in the best manner in ensuring free and fair exam. Stating that MLA, A. S. Patil Nadahalli has been supporting the staff, he said that the cooperation of Scouts and Guides is must.

He said that the staff should arrive at the designated exam centres well in advance to discharge their duty. They should conduct health check up, ensure that students wearing masks and also maintaining social distance.

H. A. Meti, D. B. Wadawadagi, S. S. Hugar, R. R. Chavan, L. K. Nadaf and others were present.

# ಸ್ಕೌಟ್ಸ್, ಗೈಡ್ಸ್ ಪದಾಧಿಕಾರಿಗಳು ಶಾಸಕ ನಡಹಳ್ಳಿಯವರಿಗೆ ಮನವಿ

**ಅಪರಾಧಕ್ಕೆ ಸವಾಲು ಕನ್ನಡ ದಿನ ಪತ್ರಿಕೆ**



**ಮುದ್ದೇಬಿಹಾಳ:** ತಾಲೂಕಿನ ಪ್ರಾಥಮಿಕ, ಪ್ರೌಢಶಾಲೆ ಮತ್ತು ಕಾಲೇಜು ಹಂತಗಳಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳಿಗೆ ಆಯ್ಕೆಗೊಳ್ಳುವ ಕಡುಬಡ ಕುಟುಂಬದ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ಒದಗಿಸಿ ಅನುಕೂಲ ಮಾಡಿಕೊಡಬೇಕು ಎಂದು ಕೋರಿ ಸ್ಕೌಟ್ಸ್, ಗೈಡ್ಸ್‌ನ ಪದಾಧಿಕಾರಿಗಳ ನಿಯೋಗ ಮಂಗಳವಾರ ಶಾಸಕ, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಅಧ್ಯಕ್ಷ ಎ.ಎಸ್.ಪಾಟೀಲ ನಡಹಳ್ಳಿಯವರಿಗೆ ಗೃಹಕಚೇರಿ ದಾಸೋಹ ನಿಲಯದಲ್ಲಿ ಮನವಿ ಸಲ್ಲಿಸಿದರು. ಈಗಾಗಲೇ ಕೋವಿಡ್-19 ನಿಯಮಗಳು ಸಡಿಲಗೊಂಡು ಶಾಲೆಗಳು ಆರಂಭಗೊಳ್ಳುವ ಹಂತದಲ್ಲಿವೆ. ಸ್ಕೌಟ್ಸ್, ಗೈಡ್ಸ್ ಘಟಕಗಳನ್ನು ಪ್ರತಿಯೊಂದು ಶಾಲೆಯಲ್ಲಿ ಪ್ರಾರಂಭಿಸಲು ಶಿಕ್ಷಣ ಇಲಾಖೆಯಿಂದ ಕ್ರಮ ಕೈಕೊಳ್ಳಲಾಗುತ್ತಿದೆ. ಕ್ಷೇತ್ರ ಶಿಕ್ಷಣಾಧಿಕಾರಿ ವೀರೇಶ ಜೇವರಗಿಯವರು ಹೆಚ್ಚಿನ ಮುತುವರ್ಜಿ ವಹಿಸಿ ಘಟಕ ಪ್ರಾರಂಭಿಸಲು ಕ್ರಮ ಜರುಗಿಸುತ್ತಿದ್ದಾರೆ. ಈ ಘಟಕಕ್ಕೆ ನೋಂದಣಿಯಾಗುವ ಮಕ್ಕಳು ಕಡ್ಡಾಯವಾಗಿ ಸಮವಸ್ತ್ರ ಹೊಂದಿರಬೇಕು. ಆದರೆ ಗ್ರಾಮೀಣ ಭಾಗದ ಕಡುಬಡ ಕುಟುಂಬದ ಮಕ್ಕಳಿಗೆ ಸಮವಸ್ತ್ರ ಖರೀದಿಸುವ ಶಕ್ತಿ ಇರುವುದಿಲ್ಲ ಎನ್ನುವುದನ್ನು ಆಯಾ ಶಾಲೆಗಳ ಶಿಕ್ಷಕರು ಗಮನಕ್ಕೆ ತಂದಿದ್ದಾರೆ. ಸ್ಥಳೀಯ ಸಂಸ್ಥೆಯು ಹೆಚ್ಚಿನ ಆರ್ಥಿಕ ಶಕ್ತಿ ಹೊಂದಿರುವುದಿಲ್ಲ. ಇದನ್ನು ಪರಿಗಣಿಸಿ ಮಾನವೀಯತೆಯ ನೆಲೆಗಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ಒದಗಿಸಲು ಕ್ರಮ ಕೈಕೊಳ್ಳಬೇಕು ಎಂದು ಕೋರಿದರು. ಸ್ಕೌಟ್ಸ್, ಗೈಡ್ಸ್ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷ ಡಿ.ಬಿ.ವಡವಡಗಿ, ಸ್ಕೌಟ್, ಗೈಡ್ಸ್ ಜಿಲ್ಲಾ ಕಾರ್ಯದರ್ಶಿ ಪಿ.ಎಸ್.ಕುಂಬಾರ, ಪದಾಧಿಕಾರಿಗಳಾಗಳು ಮುಂತಾದವರು ಇದ್ದರು.

# M.G.V.C ARTS, COMMERCE AND SCIENCE COLLEGE, MUDDEBIHAL

## PRESS CLUB (PAPER CUTTINGS)

# BS&G honors PSI Mallappa Maddi, thanked for his support



**Bijapur Mirror:**

MUDDEBIHAL; 13 Mar: The members of Bharat Scouts and Guides held programme to felicitate PSI Mallappa Maddi who served for nearly three years in the town and got transfer to Bijapur city.

On the occasion, Executive Chairman of Guides, S. S. Hugar said that Maddi always supported the activities of Guides.

In his address, vice president, D. B. Wadawadagi recalled how Maddi supported and cooperated in all the events held by the Guides.

He said Guides need public support for the growth and popularity among the students.

Pratibha Angadageri, Sangamma Devaralli, Gundu Chavan, Gopal Hugar, L.K Nadaf, S. R. Sulpi, S. D. Kademani and others were present. The journalists also honored Maddi. A. L. Mulla, Siddu Chalawadi, Parashuram Kannur, Sagar Ukali, Muttu Wadawadagi, Ladlemashak Nadaf, Shivakumar Sharadalli, Ravindra Nandeppanavar, Chetan Shivashimpi, Basavaraj Chintamani and others were present.

# ಭಾರತ ಸ್ಕೌಟ್ಸ್– ಗೈಡ್ಸ್‌ನಿಂದ ಮುದ್ದೇಬಿಹಾಳದಲ್ಲಿ ನಿರ್ಗಮಿತ ಪೋಲಿಸ ಅಧಿಕಾರಿಗೆ ಬೀಳ್ಕೊಡುಗೆ



ಮುದ್ದೇಬಿಹಾಳ, ೧೨– ಪಟ್ಟಣದ ಪೊಲೀಸ್ ಠಾಣೆಯಲ್ಲಿ ಎರಡೂವರೆಯಷ್ಟು ಸುಧೀರ್ಘ ವರ್ಷಗಳವರೆಗೆ ಪಿಎಸೈ ಆಗಿ ಸೇವೆ ಸಲ್ಲಿಸಿ ವಿಜಯಪುರಕ್ಕೆ ವರ್ಗಾವಣೆಗೊಂಡಿರುವ ಮಲ್ಲಪ್ಪ ಮಡ್ಡಿಯವರನ್ನು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಸ್ಥಳೀಯ ಸಂಸ್ಥೆ ಪರವಾಗಿ ಶುಕ್ರವಾರ ಸನ್ಮಾನಿಸಿ ಬೀಳ್ಕೊಡಲಾಯಿತು.

ಈ ಸಂದರ್ಭ ಮಾತನಾಡಿದ ಸಂಸ್ಥೆಯ ಎಕ್ಸೀಕ್ಯೂಟಿವ್ ಕಮೀಟಿ ಚೇರಮನ್ ಪ್ರೊ.ಎಸ್.ಎಸ್.ಹೂಗಾರ ಅವರು ಮಡ್ಡಿ ಅವರು ಪಟ್ಟಣದಲ್ಲಿ ಸ್ಕೌಟ್ಸ್ ಗೈಡ್ಸ್ ಚಟುವಟಿಕೆಗಳಿಗೆ ಬೆಂಬಲವಾಗಿದ್ದರು. ಸಾಕಷ್ಟು ಸಹಾಯ, ಸಹಕಾರ ನೀಡಿ ಮಕ್ಕಳಲ್ಲಿ ಶಿಸ್ತು, ಕರ್ತವ್ಯಪ್ರಜ್ಞೆ ಮೂಡಲು ಸಕಾಲಿಕ ಕ್ರಮ ಕೈಕೊಂಡಿದ್ದರು ಎಂದರು.

ಸಂಸ್ಥೆ ಉಪಾಧ್ಯಕ್ಷ ಡಿ.ಬಿ.ವಡವಡಗಿ ಮಾತನಾಡಿ ಒಂದೂವರೆ ವರ್ಷದ ಹಿಂದೆ ಸ್ಕೌಟ್ಸ್ ಗೈಡ್ಸ್ ಮಕ್ಕಳಿಗೆ ಪುಟಾಣಿ ಪೊಲೀಸ್ ಶಿಬಿರ ಏರ್ಪಡಿಸಬೇಕಾದ ಸಂದರ್ಭ ಬಂದಾಗ ಮಡ್ಡಿಯವರು ನಮಗೆ ಸಾಕಷ್ಟು ಸಹಕಾರ ನೀಡಿದ್ದರು. ಮಕ್ಕಳನ್ನು ಪೊಲೀಸ್ ಠಾಣೆ ಭೇಟಿಗೆ ಕರೆತಂದಾಗ ಅವರಿಗೆ ಮಾರ್ಗದರ್ಶನ ನೀಡಿ ಪೊಲೀಸರ ಕಾರ್ಯಚಟುವಟಿಕೆ ಪರಿಚಯಿಸಿದ್ದರು. ಆಗಿ ಡಿಎಸ್ಪಿಯಾಗಿದ್ದ ಈ.ಶಾಂತವೀರ ಅವರನ್ನು ಇಲ್ಲಿಗೆ ಕರೆಸಿ ಅವರಿಂದ ಸಾಧಕ ಮಕ್ಕಳಿಗೆ ಪೊಲೀಸ್ ಇಲಾಖೆ ವತಿಯಿಂದ ಪ್ರಶಸ್ತಿಗಳನ್ನು ಕೊಡಿಸಲೂ ಶ್ರಮಿಸಿದ್ದರು. ಅವರಿಂದ ಸ್ಕೌಟ್ಸ್ ಗೈಡ್ಸ್ ಬೆಳವಣಿಗೆಗೆ ಹೆಚ್ಚು ನೆರವು ಸಿಕ್ಕಿದೆ ಎಂದರು.

ಸಂಸ್ಥೆಯ ಮಹಿಳಾ ಉಪಾಧ್ಯಕ್ಷರೂ ಆದ ಪುರಸಭೆ ಅಧ್ಯಕ್ಷೆ ಪ್ರತಿಭಾ ಅಂಗಡಗೇರಿ, ಪುರಸಭೆ ಸದಸ್ಯೆ ಸಂಗಮ್ಮ ದೇವರಳ್ಳಿ, ಸಂಸ್ಥೆಯ ಕಾರ್ಯದರ್ಶಿ ಗುಂಡು ಚವ್ಹಾಣ, ಖಜಾಂಚಿ ಗೋಪಾಲ ಹೂಗಾರ, ಪದಾಧಿಕಾರಿಗಳಾದ ಎಲ್.ಕೆ.ನದಾಫ, ಎಸ್.ಆರ್.ಸುಲ್ಫಿ, ಎಸ್.ಡಿ.ಕೆಳಗಿನಮನಿ, ಸಮಾಜಸೇವಕ ಹಣಮಂತ್ರಾಯ ದೇವರಳ್ಳಿ ಮತ್ತಿತರರು ಇದ್ದರು.

**ನೂತನ ಪಿಎಸೈಗೂ ಸನ್ಮಾನ:**

ಹೊಸದಾಗಿ ಇಲ್ಲಿನ ಪೊಲೀಸ್ ಠಾಣೆಗೆ ಪಿಎಸೈ ಆಗಿ ಅಧಿಕಾರ ವಹಿಸಿಕೊಂಡ ಪಿಎಸೈ ಎಂ.ಬಿ.ಬಿರಾದಾರ ಅವರನ್ನು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆ ಹಾಗೂ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಸನ್ಮಾನಿಸಿ ಸ್ವಾಗತ ಕೋರಲಾಯಿತು. ಪೊಲೀಸ್ ಠಾಣೆ ಆವರಣದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಮಾತನಾಡಿದ ಸ್ಕೌಟ್ಸ್ ಗೈಡ್ಸ್ ಎಕ್ಸೀಕ್ಯೂಟಿವ್ ಕಮೀಟಿ ಚೇರಮನ್ ಪ್ರೊ.ಎಸ್.ಎಸ್.ಹೂಗಾರ ಅವರು ಪಟ್ಟಣ ಸೇರಿದಂತೆ ತಾಲೂಕಿನಲ್ಲಿ ಸ್ಕೌಟ್ಸ್ ಗೈಡ್ಸ್ ಚಟುವಟಿಕೆ ಬೆಳೆಯಲು ಮತ್ತು ವಿದ್ಯಾರ್ಥಿಗಳಿಗೆ ಪೊಲಿಸ್ ಠಾಣೆ, ಪೊಲೀಸರ ಕರ್ತವ್ಯ ಹಾಗೂ ಚಟುವಟಿಕೆಗಳ ಅರಿವು ಮೂಡಿಸಲು ನೆರವಾಗುವಂತೆ ಕೋರಿದರು. ಕಾಲೇಜು ಹಂತದಲ್ಲಿರುವ ರೇಂಜರ್ಸ್ ಮತ್ತು ರೋವರ್ಸ್‌ಗೆ ಟ್ರಾಫಿಕ್ ನಿಯಂತ್ರಣ, ಸಿಗ್ನಲ್‌ಗಳ ಅರಿವು ಮೂಡಿಸಲು ಸಹಕರಿಸುವಂತೆ ಕೋರಿದರು.

ವರು

# M.G.V.C ARTS, COMMERCE AND SCIENCE COLLEGE, MUDDEBIHAL

## PRESS CLUB (PAPER CUTTINGS)

ನಂಗೆ ಗೊತ್ತಿಲ್ಲ ಇನ್ಮುಂದೆ ಯಾವುದೇ ... ಸೇರಿದಂತೆ ಪೊಲೀಸ್ ಸಿಬ್ಬಂದಿ ಇದ್ದರು. ... ದೇವರಳ್ಳಿ, ಸಹನಾ ಬಡಿಗೇರ, ಚನ್ನಪ್ಪ ಕಂಠಿ, ...

# ದೇಶಪ್ರೇಮ ಬೆಳೆಸಲು ಸ್ಕೌಟ್ಸ್-ಗೈಡ್ಸ್ ಸಹಕಾರಿ: ಹೂಗಾರ

**ಮುದ್ದೇಬಿಹಾಳ:** ಸೇವೆಗೆ ಇನ್ನೊಂದು ಹೆಸರೇ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಆಗಿದೆ. ಇದು ವಿದ್ಯಾರ್ಥಿಗಳಲ್ಲಿ ದೇಶಪ್ರೇಮ ಬೆಳೆಸುವ ಮೂಲಕ ಸಮಾಜದ ಉತ್ತಮ ನಾಗರಿಕರನ್ನಾಗಿ ರೂಪಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತದೆ ಎಂದು ಎಂಜಿವಿಸಿ ಕಾಲೇಜಿನ ಉಪನ್ಯಾಸಕ, ಬಿಎಸ್‌ಜಿ ಸಂಸ್ಥೆಯ ಚೇರಮನ್ ಎಸ್.ಎಸ್. ಹೂಗಾರ ಹೇಳಿದರು.

ಪಟ್ಟಣದ ವಿದ್ಯಾ ನಗರದಲ್ಲಿರುವ ತರಬೇತಿ ಕೇಂದ್ರದಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮುದ್ದೇಬಿಹಾಳ ತಾಲೂಕು ಸ್ಥಳೀಯ ಸಂಸ್ಥೆ ವತಿಯಿಂದ ಏರ್ಪಡಿಸಿದ್ದ ಸಂಸ್ಥಾಪಕರ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಲಾರ್ಡ್ ಬೆಡೆನ್ ಪೋವೆಲ್, ಲೇಡಿ ಬೆಡೆನ್ ಪೋವೆಲ್ ಅವರು ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯನ್ನು ಹುಟ್ಟು ಹಾಕಿದರು. ಗುಡ್ಡಗಾಡು ಜನರ ಮಕ್ಕಳಿಂದ ಪ್ರಾರಂಭಗೊಂಡ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದಿದೆ. ಅವರ ಸೇವೆ ಸಮಾಜಕ್ಕೆ ಮುಡಿಪಾಗಿತ್ತು. ಅಂತೆಯೇ ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿ ಸೇವೆ ಸಲ್ಲಿಸುವವರು ಸೇವಾ ಮನೋಭಾವ ಹೊಂದಿರುತ್ತಾರೆಯೇ ಹೊರತು ಲಾಭದ ಮನೋಭಾವ ಹೊಂದಿರುವುದಿಲ್ಲ ಎಂದರು.



ಮುದ್ದೇಬಿಹಾಳ: ಸ್ಕೌಟ್ಸ್, ಗೈಡ್ಸ್ ಸಂಸ್ಥಾಪಕರ ದಿನಾಚರಣೆಯಲ್ಲಿ ಎಸ್.ಎಸ್. ಹೂಗಾರ ಮಾತನಾಡಿದರು.

ಸಂಸ್ಥೆಯ ಅಧ್ಯಕ್ಷರೂ ಆಗಿರುವ ಡಿಸಿಸಿ ಬ್ಯಾಂಕ್ ನಿರ್ದೇಶಕ ಸೋಮನಗೌಡ ಬಿರಾದಾರ ಕವಡಿಮಟ್ಟಿ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆ ಉಪಾಧ್ಯಕ್ಷ ಡಿ.ಬಿ. ವಡವಡಗಿ, ಪ್ರಭಾರ ದೈಹಿಕ ಶಿಕ್ಷಣಾಧಿಕಾರಿ ಎಚ್.ಎಲ್. ಕರಡ್ಡಿ, ಸಂಸ್ಥೆ ಮಹಿಳಾ ಉಪಾಧ್ಯಕ್ಷರಾಗಿರುವ ಪುರಸಭೆ ಸದಸ್ಯರಾದ ಸಂಗಮ್ಮ ದೇವರಳ್ಳಿ, ಸಹನಾ ಬಡಿಗೇರ, ಸಮಾಜ ಸೇವಕ ಹನುಮಂತ್ರಾಯ ದೇವರಳ್ಳಿ, ಪದಾಧಿಕಾರಿಗಳಾದ ಎಸ್.ಜಿ. ಮುತ್ತಪ್ಪನವರ, ವಿ.ವಿ. ಮಾಲಿಪಾಟೀಲ, ಎಸ್.ಬಿ. ಗೊಂಗಡಿ, ಎಸ್.ಆರ್. ಸುಲ್ಪಿ ವೇದಿಕೆಯಲ್ಲಿದ್ದರು. ಎಂಜಿವಿಸಿ ಕಾಲೇಜಿನ ರೋವರ್ಸ್, ರೇಂಜರ್ಸ್ ಇದ್ದರು.

ಪೋವೆಲ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಸಂಸ್ಥೆ ಕಾರ್ಯದರ್ಶಿ ಜಿ.ಎಚ್. ಚವ್ಹಾಣ ನಿರೂಪಿಸಿದರು. ಎಲ್.ಕೆ. ನದಾಫ್ ವಂದಿಸಿದರು.

**ಶ್ರಮದಾನ:** ಕಾರ್ಯಕ್ರಮಕ್ಕೂ ಮುನ್ನ ಎಂಜಿವಿಸಿ ಕಾಲೇಜಿನ ರೇಂಜರ್ಸ್, ರೋವರ್ಸ್ ತಂಡ ತರಬೇತಿ ಕೇಂದ್ರದ ಆವರಣದಲ್ಲಿ ಸ್ವಚ್ಛತಾ ಕಾರ್ಯ ನಡೆಸುವ ಮೂಲಕ ಶ್ರಮದಾನ ಮಾಡಿ ದಿನಾಚರಣೆ ಸಾರ್ಥಕಗೊಳಿಸಿದರು.

ಉದಯವಾಣಿ Thu, 25 February 2021
https://epaper.udayavani.com/c/58671426

---

ಸರ್ಕಾರದ ಪ್ರೋತ್ಸಾಹದಾಯಕ ... ನೂತನ ಸದಸ್ಯರು ಭಾಗವಹಿಸಿದ್ದರು.

# ಆರೋಗ್ಯ ಯೋಜನೆ ಅರಿವು ಅಗತ್ಯ



ಮುದ್ದೇಬಿಹಾಳ: ಎಂಜಿವಿಸಿ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಆರೋಗ್ಯ ಯೋಜನೆಗಳ ಅರಿವು ಕಾರ್ಯಕ್ರಮದಲ್ಲಿ ಅನುಸೂಯಾ ತೇರದಾಳ ಮಾತನಾಡಿದರು.

**ಮುದ್ದೇಬಿಹಾಳ:** ವಿದ್ಯಾರ್ಥಿಗಳು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅರಿವು ಹೊಂದಿರಬೇಕು. ಇದಕ್ಕಾಗಿ ಪ್ರತಿಯೊಂದು ಶಾಲೆ, ಕಾಲೇಜುಗಳಲ್ಲಿ ವಿವಿಧ ರೋಗಗಳ ಅರಿವು ಮೂಡಿಸುವ ಕಾರ್ಯಕ್ರಮಗಳು ನಿರಂತರ ನಡೆಯುತ್ತಿರಬೇಕು ಎಂದು ಆರೋಗ್ಯ ಇಲಾಖೆಯ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಅನುಸೂಯಾ ತೇರದಾಳ ಹೇಳಿದರು.

ಪಟ್ಟಣದ ಎಂಜಿವಿಸಿ ಕಾಲೇಜಿನಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅರಿವು ಮೂಡಿಸುವ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಪಲ್ಸ್ ಪೋಲಿಯೋ, ಇಂದ್ರಧನುಷ್, ಕುಷ್ಠರೋಗ ಪತ್ತೆ, ಅನೀಮಿಯಾ ಮುಂತಾದವುಗಳು ಈ ಯೋಜನೆಯಡಿ ಬರುತ್ತವೆ. ಇವುಗಳನ್ನು ದೇಶದಿಂದ ನಿರ್ಮೂಲನೆ ಮಾಡಲು ಸರ್ಕಾರ ಹಲವು ಹಂತಗಳ ಕಾರ್ಯಕ್ರಮ ಹಮ್ಮಿಕೊಂಡಿದೆ. ಈ ರೋಗಗಳಿಂದ ಭಾರತ ದೇಶವನ್ನು ಮುಕ್ತಗೊಳಿಸಲು ಸಮರೋಪಾದಿ ಕಾರ್ಯಕ್ರಮಗಳು ನಿರಂತರ ನಡೆಯುತ್ತಿವೆ. ಇಂಥ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಸ್ವಯಂಪ್ರೇರಿತರಾಗಿ ತೊಡಗಿಸಿಕೊಂಡು ಸರ್ಕಾರದೊಂದಿಗೆ ಕೈಜೋಡಿಸಬೇಕು ಎಂದರು.

ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಚೇರ್ಮನ್, ಎಂಜಿವಿಸಿ ಕಾಲೇಜಿನ ಸ್ಕೌಟ್ಸ್ ಲೀಡರ್ ಎಸ್.ಎಸ್. ಹೂಗಾರ ಮಾತನಾಡಿ, ವಿದ್ಯಾರ್ಥಿಗಳು ಸ್ವಯಂ ಸೇವಕರಾಗಿ ಆರೋಗ್ಯ ಸಂಬಂಧಿ ಯೋಜನೆಗಳ ಅರಿವು ಹೊಂದಿರುವುದರ ಜೊತೆಗೆ ಅವುಗಳನ್ನು ಎಲ್ಲ ಕಡೆ ಪ್ರಚಾರ ಮಾಡಿ ಜನಜಾಗೃತಿ ಉಂಟು ಮಾಡಬೇಕು ಎಂದು ಸಲಹೆ ನೀಡಿದರು. ಆರೋಗ್ಯ ಇಲಾಖೆಯ ಎಸ್‌ಟಿಎಸ್ ಸಿದ್ದನಗೌಡ ಬಿದರಕುಂದ ಕ್ಷಯರೋಗದ ಕುರಿತು ಮಾತನಾಡಿ ವಿದ್ಯಾರ್ಥಿಗಳಲ್ಲಿ ಆ ರೋಗ ನಿರ್ಮೂಲನೆಯ ಅರಿವು ಮೂಡಿಸಿದರು.

ಕಾಲೇಜಿನ ಎನ್‌ಸಿಸಿ, ಎನ್ನೆಸ್ಸೆಸ್, ಸ್ಕೌಟ್ಸ್ ಮತ್ತು ಗೈಡ್ಸ್ ಅಧಿಕಾರಿಗಳು, ಸ್ವಯಂಸೇವಕರು ಪಾಲ್ಗೊಂಡಿದ್ದರು. ಸ್ಕೌಟರ್ ಹೊನ್ನಪ್ಪ ನಿರೂಪಿಸಿದರು. ದೈಹಿಕ ಶಿಕ್ಷಣ ನಿರ್ದೇಶಕ ಉಮೇಶ ಕೋನರಡ್ಡಿ ವಂದಿಸಿದರು.

ಉದಯವಾಣಿ Thu, 18 February 2021

# M.G.V.C ARTS, COMMERCE AND SCIENCE COLLEGE, MUDDEBIHAL

## PRESS CLUB (PAPER CUTTINGS)

### ಸ್ಕೌಟ್ಸ್ ಪ್ರಮಾಣಪತ್ರ ವಿತರಣೆ

ಮುದ್ದೇಬಿಹಾಳ: ಪಟ್ಟಣದ ಶಹಾ ಎಸ್.ಪಿ. ಓಸ್ವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ನಿಪುಣ ಪರೀಕ್ಷೆ ಪಾಸಾಗಿರುವ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸುವ, ರೋವರ್ಸ್ ಘಟಕದ ಯಶಸ್ವಿ ನಾಯಕ ಎಸ್.ಎಸ್. ಹೂಗಾರ ಅವರನ್ನು ಸನ್ಮಾನಿಸುವ ಕಾರ್ಯಕ್ರಮ ನಡೆಯಿತು.

ಮುಖ್ಯ ಅತಿಥಿಯಾಗಿದ್ದ ಎಂಜಿವಿಸಿ ಕಾಲೇಜಿನ ಸಹ ಪ್ರಾಧ್ಯಾಪಕ ಹಾಗೂ ರೋವರ್ಸ್ ಘಟಕದ ನಾಯಕ ಎಸ್.ಎಸ್.ಹೂಗಾರ, ಅತಿಥಿಯಾಗಿದ್ದ ಇತಿಹಾಸ ಸಂಶೋಧಕ ಡಾ| ಮಹೇಶ ಪಾಟೀಲ, ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ| ಎನ್.ಬಿ. ಹೊಸಮನಿ ಅವರು ಸ್ಕೌಟ್ಸ್ ಮತ್ತು ಗೈಡ್ಸ್‌ನ ನಾಯಕತ್ವ ಬೆಳೆಸುವ ಚಟುವಟಿಕೆಗಳು, ವಿದ್ಯಾರ್ಥಿಗಳಲ್ಲಿ ಮುಂದಾಳತ್ವದ ಮನೋಭಾವದ ಬೆಳವಣಿಗೆ ಸೇರಿದಂತೆ ಹಲವು ವಿಷಯಗಳ ಕುರಿತು ಮಾತನಾಡಿದರು.

ರೋವರ್ ಮಲ್ಲಿಕಾರ್ಜುನ ಬಡಿಗೇರ, ರೇಂಜರ್ ಸಿದ್ದಮ್ಮ ಪಾಟೀಲ ಗೋಳಸಾರದಲ್ಲಿ ನಡೆದ ಶಿಬಿರದ ಅನಿಸಿಕೆ ಹಂಚಿಕೊಂಡರು. ನಿಪುಣ ಪರೀಕ್ಷೆ ಪಾಸು ಮಾಡಿದ ರೋವರ್‌ಗಳಾದ ಮಲ್ಲಿಕಾರ್ಜುನ ಬಿರಾದಾರ, ಹನುಮಂತಪ್ಪ ಹುಲ್ಲಳ್ಳಿ, ಶ್ರೀಶೈಲ ಚಲವಾದಿ, ವಿಶ್ವನಾಥ ಲಮಾಣಿ, ವೀರೇಶ ಸಿದ್ದಣ್ಣ, ಮಲ್ಲಿಕಾರ್ಜುನ ಬಡಿಗೇರ, ರೋಹಿತ್ ಮೂಲಿಮನಿ, ಭೀಮನಗೌಡ ಪಾಟೀಲ ಹಾಗೂ ರೇಂಜರ್‌ಗಳಾದ ಸಿದ್ದಮ್ಮ ಪಾಟೀಲ, ಮಂಜುಳಾ ಹೊಕ್ರಾಣಿ, ವಿಶಾಲಾಕ್ಷಿ ಕುಲಕರ್ಣಿ ಅವರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಗೋಳಸಾರದಲ್ಲಿ ನಡೆದ ಶಿಬಿರದ ಯಶಸ್ವಿ ನಾಯಕರೆನ್ನಿಸಿಕೊಂಡ ಎಂಜಿವಿಸಿ ಕಾಲೇಜು ರೋವರ್ಸ್ ಘಟಕದ ನಾಯಕ ಎಸ್.ಎಸ್. ಹೂಗಾರ ಅವರಿಗೆ ಬಸವಣ್ಣನ ಭಾವಚಿತ್ರ ನೀಡಿ ಸನ್ಮಾನಿಸಲಾಯಿತು. ಭೀಮನಗೌಡ ಪಾಟೀಲ ಸ್ವಾಗತಿಸಿದರು. ಶ್ರೀಶೈಲ ಚಲವಾದಿ ನಿರೂಪಿಸಿದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರೋವರ್ಸ್ ನಾಯಕ ಶಶಿಧರ ಕುಂಬಾರ ಪ್ರಾಸ್ತಾವಿಕ ಮಾತನಾಡಿದರು. ಬಿ.ಎಸ್. ಶೋಭಾ ವಂದಿಸಿದರು.



ಮುದ್ದೇಬಿಹಾಳ: ಎಂಜಿವಿಸಿ ಕಾಲೇಜಿನ ರೋವರ್ಸ್ ಘಟಕದ ನಾಯಕ ಎಸ್.ಎಸ್. ಹೂಗಾರ ಅವರನ್ನು ಸನ್ಮಾನಿಸಲಾಯಿತು.

ಉದಯವಾಣಿ Sat, 13 February 2021 https://epaper.udayavani.com/c/5

### ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರದಲ್ಲಿ ಸ್ವಚ್ಛತಾ ಕಾರ್ಯ



ಮುದ್ದೇಬಿಹಾಳ,ಡಿ.6: ಪಟ್ಟಣದ ವಿದ್ಯಾನಗರದಲ್ಲಿರುವ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರದ ಆವರಣದಲ್ಲಿ ಪುರಸಭೆಯ ಜನಪ್ರತಿನಿಧಿಗಳು, ಸಿಬ್ಬಂದಿ ವರ್ಗ, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್‌ನ ಪದಾಧಿಕಾರಿಗಳು ಸ್ವಚ್ಛತಾ ಕಾರ್ಯ ನಡೆಸಿದರು.

ಈ ಕೇಂದ್ರದಲ್ಲಿ ಮೊದಲು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ನಡೆಯುತ್ತಿತ್ತು. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದ್ದರಿಂದ ಶಾಲೆಯನ್ನು ಬೇರೆ ಶಾಲೆಯಲ್ಲಿ ಸೇರ್ಪಡೆ ಮಾಡಿದ್ದರಿಂದ ಕಳೆದ 4–5 ವರ್ಷಗಳಿಂದ ಇದು ನಿರರ್ಥಕವಾಗಿತ್ತು. ಸುತ್ತಲೂ ಮುಳ್ಳುಕಂಟಿ ಬೆಳೆದು ಅರಣ್ಯದ ಪರಿಸರ ಸೃಷ್ಟಿಸಿತ್ತು. ಅಕ್ಕಪಕ್ಕದಲ್ಲಿ ಜನವಸತಿ ಪ್ರದೇಶ ಇರುವುದರಿಂದ ವಿದ್ಯಾನಗರ ಮತ್ತು ಹುಡ್ಕೋ ವಾರ್ಡ್ ಪ್ರತಿನಿಧಿಸುವ ಪುರಸಭೆ ಸದಸ್ಯರಾದ ಸಹನಾ ಬಡಿಗೇರ ಮತ್ತು ಸಂಗಮ್ಮ ದೇವರಳ್ಳಿ ಅವರು ಸ್ವಚ್ಛತಾ ಕಾರ್ಯ ನಡೆಸುವ ವಿಚಾರವನ್ನು ತಿಳಿಯಪಡಿಸಿ ಪುರಸಭೆಯ ಆರೋಗ್ಯ ವಿಭಾಗದ ಸಿಬ್ಬಂದಿಯ ನೆರವು ಕೋರಿದ್ದರು.

ಸ್ಥಳಕ್ಕೆ ಆಗಮಿಸಿದ ಪುರಸಭೆಯ ಆರೋಗ್ಯ ವಿಭಾಗದ ಆರೋಗ್ಯ ನಿರೀಕ್ಷಕರಾದ ಮಹಾಂತೇಶ ಕಟ್ಟಿಮನಿ, ಜಾವೀದಅಹ್ಮದ್ ನಾಯ್ಕೋಡಿ ಅವರು ಪುರಸಭೆಯ ಜೆಸಿಬಿ ಯಂತ್ರ ಮತ್ತು ಪೌರಸಿಬ್ಬಂದಿಯನ್ನು ಕರೆತಂದು ಮುಳ್ಳುಕಂಟಿ ತೆರವುಗೊಳಿಸತೊಡಗಿದ್ದರು. ಇದೇ ವೇಳೆ ಇವರಿಗೆ ಜೊತೆಗೂಡಲು ಪುರಸಭೆ ಸದಸ್ಯರಾದ ಸಹನಾ ಬಡಿಗೇರ, ಸಂಗಮ್ಮ ದೇವರಳ್ಳಿ, ಪುರಸಭೆ ಅಧ್ಯಕ್ಷ ಪ್ರತಿಭಾ ಅಂಗಡಗೇರಿ, ಪುರಸಭೆ ಉಪಾಧ್ಯಕ್ಷೆ ಶಹಜಾದಬಿ ಹುಣಚಗಿ ಅವರೂ ಸ್ವಚ್ಛತಾ ಕಾರ್ಯಕ್ಕೆ ಕಸಬರಿಗೆ ಹಿಡಿದು ಕೈ ಜೋಡಿಸಿದರು. ಸ್ಕೌಟ್ಸ್ ಮತ್ತು ಗೈಡ್ಸ್ ಕಾರ್ಯದರ್ಶಿ ಜಿ.ಎಚ್.ಚವ್ಹಾಣ, ಖಜಾಂಚಿ ಗೋಪಾಲ ಹೂಗಾರ, ಪದಾಧಿಕಾರಿ ಎಲ್.ಕೆ.ನದಾಫ, ಬಡಾವಣೆಯ ಪ್ರಮುಖರಾದ ವಿಜಯ್‌ಕುಮಾರ ಬಡಿಗೇರ, ರುದ್ರಗೌಡ ಅಂಗಡಗೇರಿ, ಅಂಗನವಾಡಿ ಮೇಲ್ವಿಚಾರಕಿ ರಿಹಾನಾ ಕಲಬುರ್ಗಿ, ಕಾರ್ಯಕರ್ತೆಯರಾದ ಶೋಭಾ ಘಾಟಗೆ, ನಿಂಬೆಕ್ಕ ಕಾಳಾಪುರ, ವಿದ್ಯಾ ಮುರಾಳ ಮತ್ತಿತರರು ಇದ್ದರು.

ಬಗೆಹರಿದ ಗೊಂದಲ: ಕೆಲ ತಪ್ಪು ಕಲ್ಪನೆಗಳಿಂದಾಗಿ ಈ ಕಟ್ಟಡ ಖಾಲಿ ಇದೆ. ಇಲ್ಲಿ ವಯಸ್ಕರ ಶಿಕ್ಷಣ, ವಿಕಲಚೇತನ ವಿದ್ಯಾರ್ಥಿಗಳ ಸೌಲಭ್ಯ ವಿತರಣಾ ಕಚೇರಿಗಳು ಮಾತ್ರ ಇವೆ ಎಂದು ತಿಳಿದು ಕೆಲವರು ವಿದ್ಯಾನಗರದ ಬಾಡಿಗೆ ಕಟ್ಟಡದಲ್ಲಿರುವ ಅಂಗನವಾಡಿ ಕೇಂದ್ರವನ್ನು ಈ ಕಟ್ಟಡಕ್ಕೆ ಸ್ಥಳಾಂತರಿಸಲು ಮುಂದಾಗಿದ್ದರು. ಇದು ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳ ಗಮನಕ್ಕೆ ಬಂದ ಕೂಡಲೇ ಅವರು ಸ್ಥಳಕ್ಕಾಗಮಿಸಿ ಈ ಕಟ್ಟಡವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಸಕ, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಅಧ್ಯಕ್ಷ ಎ.ಎಸ್.ಪಾಟೀಲ ನಡಹಳ್ಳಿ ಅವರ ಶಿಫಾರಸಿನ ಮೇರೆಗೆ ಶಿಕ್ಷಣ ಇಲಾಖೆಯ ಒಂದು ಭಾಗವಾಗಿರುವ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರ ನಡೆಸಲು ಕೊಟ್ಟಿದ್ದನ್ನು ಗಮನಕ್ಕೆ ತಂದರು. ಸತ್ಯ ತಿಳಿದ ಮೇಲೆ ಈ ಕಟ್ಟಡದಲ್ಲಿ ಅಂಗನವಾಡಿ ಸ್ಥಳಾಂತರಿಸುವ ವಿಚಾರ ಕೈಬಿಟ್ಟು, ಬೇರೆ ಕಡೆ ಅಂಗನವಾಡಿ ಕೇಂದ್ರಕ್ಕೆ ಕಟ್ಟಡ ದೊರಕಿಸಿಕೊಡಲು ಅಲ್ಲಿದ್ದ ಅಧ್ಯಕ್ಷೆ ಪ್ರತಿಭಾ, ಉಪಾಧ್ಯಕ್ಷೆ ಶಾಜಾದಬಿ ಮತ್ತು ಸದಸ್ಯರು ತೀರ್ಮಾನಿಸಿ ಬೇರೆ ಕಡೆ ಸ್ಥಳ ಪರಿಶೀಲನೆಗೆ ತೆರಳಿದರು.

ಈ ಸಂಜೆ Sun, 06 December 2020 https://epaper.eesanje.com/c/56837331

# PRESS CLUB (PAPER CUTTINGS)

## The Scouting Waves

" A Scout smiles and whistles under all circumstances. " - Lord Baden Powell 4



The Bharat Scouts and Guides Karnataka, Scouts and Guides New Building at Moodabidri on 01-02-2021 Shri Madhusudan Avala Deputy International Commissioner Presenting The Scouts and Guides 2021 Calendar to Dr. Mohan Alva President, Alva's Educational Institute, Moodabidre and Dr. Mohan Alva has Explained the complete information about the auditorium. Shri Gangappa Gowda State Secretary Sri Prabhakar Bhat State Organization Commissioner were also present and obtained information about the newly constructed Scouts and Guides Kannada Bhavan Hall.











Vijayapura: On 1st Feb 2021 moments at the Rovers and Rangers Nipun test camp.

## The Scouting Waves

" A Scout smiles and whistles under all circumstances. " - Lord Baden Powell 2

### BE PREPARED





*The Bharat Scouts and Guides Karnataka, Chitradurga District Association Hosadurga Taluk Honnanahalli Government Senior Primary School, Jatha organized a small informative rally in the taluk, for all the people as part of the National Girls Day. The Scouts and Guides made their own posters for informing the villagers.*

*An information camp was organized by the Local Association for all the Scout Masters and the Guide Captains on the 21st January 2021 at Chitradurga District, Ramgiri Hobali, Holalkere Taluk for the betterment of Scouting and Guiding after the Pandemic.*









*A new Ranger unit was started at S.B.S. Arts, Commerce & Science College for Women in VIJAYAPURA on the 21st January 2021. The Young People was given all the instructions on how to be a good Ranger and gave them how the Rangering will resume during the pandemic. The Adult Leaders of the new unit gave them a glimpse on the activities that were conducted during the COVID-19 pandemic for Rangering in INDIA.*

**Alone we can do so little; together we can do so much.**

**- Helen Keller**

# M.G.V.C ARTS, COMMERCE AND SCIENCE COLLEGE, MUDDEBIHAL

## PRESS CLUB (PAPER CUTTINGS)

### ಮಕ್ಕಳಲ್ಲಿ ನಾಯಕತ್ವ ಬೆಳವಣಿಗೆಗೆ ಪ್ರೋತ್ಸಾಹ ಅಗತ್ಯ



ಮುದ್ದೇಬಿಹಾಳ,ಜ.20: ತಾಲೂಕಿನ ಪ್ರತಿಯೊಂದು ಪ್ರಾಥಮಿಕ, ಪ್ರೌಢ ಮತ್ತು ಕಾಲೇಜುಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ವಿಭಾಗ ಪ್ರಾರಂಭಿಸುವ ಮೂಲಕ ಮಕ್ಕಳಿಗೆ ನಾಯಕತ್ವದ ಬೆಳವಣಿಗೆಗೆ ಪ್ರೋತ್ಸಾಹ ನೀಡಬೇಕು ಎಂದು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮುದ್ದೇಬಿಹಾಳ ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಸೋಮನಗೌಡ ಬಿರಾದಾರ ಕವಡಿಮಟ್ಟಿ ಮನವಿ ಮಾಡಿದರು.

ಮುದ್ದೇಬಿಹಾಳ ಪಟ್ಟಣದ ಬಿಇಒ ಕಾರ್ಯಾಲಯ ಸಭಾಂಗಣದಲ್ಲಿ ನಡೆದ ಸಂಸ್ಥೆಯ ಮುಖ್ಯ ಹಾಗೂ ಉಪ ಘಟಕಗಳ ಪದಾಧಿಕಾರಿಗಳ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

2020-21ನೇ ಸಾಲಿಗೆ ಆಯಾ ಶಾಲೆಗಳಲ್ಲಿರುವ ದಳಗಳನ್ನು ಜನೇವರಿ ಅಂತ್ಯದೊಳಗೆ ನವೀಕರಿಸಿಕೊಳ್ಳಬೇಕು. ಫೆಬ್ರವರಿ 15ರೊಳಗಾಗಿ ಹೊಸ ದಳಗಳನ್ನು ನೋಂದಣಿ ಮಾಡಿಸಿಕೊಳ್ಳಬೇಕು. ಎಲ್ಲ ಶಾಲೆಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕ ಇರುವುದು ಆಯಾ ಶಾಲೆ, ಕಾಲೇಜುಗಳಿಗೆ ಹೆಮ್ಮೆ ತಂದುಕೊಡುವಂಥದ್ದು. ಇದರ ಪ್ರಯೋಜನವನ್ನು ಎಲ್ಲ ಶಾಲೆಯವರು ಪಡೆದುಕೊಳ್ಳಬೇಕು ಎಂದರು.

ಫೆಬ್ರವರಿ ತಿಂಗಳ ಎರಡನೇ ವಾರದಲ್ಲಿ ಸಂಸ್ಥೆಯ ನೂತನ ಪದಾಧಿಕಾರಿಗಳ ಪದಗ್ರಹಣ, ಮುದ್ದೇಬಿಹಾಳ ಪಟ್ಟಣದ ವಿದ್ಯಾನಗರದಲ್ಲಿರುವ ತಾಲೂಕು ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರದ ಉದ್ಘಾಟನೆ, ಕಳೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದವರಿಗೆ ಶಿಕ್ಷಣ ಸಚಿವರಿಂದ ಬಂದಿರುವ ಪ್ರಮಾಣ ಪತ್ರ ವಿತರಣೆ, ಕೊರೊನಾ ಅವಧಿಯಲ್ಲಿ ನೆರವು ನೀಡಿದ ದಾನಿಗಳಿಗೆ ಸನ್ಮಾನ ಸೇರಿ ಹಲವು ಸಂಯುಕ್ತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು ಇದರ ಯಶಸ್ವಿಗೆ ಸಂಸ್ಥೆಯ ಎಲ್ಲರೂ ಕೈಜೋಡಿಸಿ ಸಹಕರಿಸಬೇಕು. ನನ್ನ ವತಿಯಿಂದ ಅತಿ ಹೆಚ್ಚಿನ ನೆರವು ನೀಡುತ್ತೇನೆ ಎಂದರು.

ಉಪಾಧ್ಯಕ್ಷರೂ ಆಗಿರುವ ಅಭ್ಯುದಯ ಸೈನ್ಸ್ ಪಿಯು ಕಾಲೇಜಿನ ಸಂಸ್ಥಾಪಕ ಕಾರ್ಯದರ್ಶಿ ಮಲ್ಲಿಕಾರ್ಜುನ ಮದರಿ ಮಾತನಾಡಿ ದೊಡ್ಡಮಟ್ಟದ ಕಾರ್ಯಕ್ರಮ ಆಯೋಜಿಸಲು ತೀರ್ಮಾನಿಸಿರುವುದು ಶ್ಲಾಘನೀಯ. ತಾಲೂಕಿನಲ್ಲಿರುವ ದೊಡ್ಡ ದೊಡ್ಡ ಶಿಕ್ಷಣ ಸಂಸ್ಥೆಗಳು ಸಂಸ್ಥೆಗೆ ನೆರವಾಗಬೇಕು ಎಂದರು.

ಸಂಸ್ಥೆಯ ಚೇರಮನ್ ಪ್ರೊ।ಎಸ್.ಎಸ್.ಹೂಗಾರ ಮಾತನಾಡಿ ಸಂಸ್ಥೆಗೆ ಮಹಾಪೋಷಕರು, ಪೋಷಕರು, ಆಜೀವ ಸದಸ್ಯರು, ಸದಸ್ಯರಾಗಲು ಇಚ್ಛಿಸುವವರು ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್.ಚವ್ಹಾಣ ಅಥವಾ ಖಜಾಂಚಿ ಜಿ.ಎನ್.ಹೂಗಾರ ಅವರನ್ನು ಸಂಪರ್ಕಿಸಬೇಕು. ಎಲ್ಲ ಶಾಲೆಗಳಲ್ಲೂ ಘಟಕ ಪ್ರಾರಂಭಿಸಲು ಆಯಾ ಶಾಲೆಗಳ ಮುಖ್ಯಾಧ್ಯಾಪಕರಿಗೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ನಿರ್ದೇಶನ ನೀಡಬೇಕು ಎಂದರು.

ಈ ವೇಳೆ ತಾಲ್ಲೂಕು ಕುರುಬರ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಮದರಿ, ಸಂಸ್ಥೆಯ ಉಪಾಧ್ಯಕ್ಷರಾದ ಡಿ.ಬಿ.ವಡವಡಗಿ, ರವಿ ನಾಯಕ, ಪುರಸಭೆ ಅಧ್ಯಕ್ಷೆ ಪ್ರತಿಭಾ ಅಂಗಡಗೇರಿ, ಪುರಸಭೆ ಸದಸ್ಯರಾದ ಸಂಗಮ್ಮ ದೇವರಳ್ಳಿ, ಸಹನಾ ಬಡಿಗೇರ ಹಾಗೂ ದೈಹಿಕ ಶಿಕ್ಷಣಾಧಿಕಾರಿ ಎಚ್.ಎಲ್.ಕರಡ್ಡಿ ಅವರು ಮಾತನಾಡಿ ಸ್ಕೌಟ್ಸ್ ಮತ್ತು ಗೈಡ್ಸ್‌ನ ಚಟುವಟಿಕೆ ವೇಗ ಪಡೆದುಕೊಂಡು ಪ್ರಭಾವಶಾಲಿಯಾಗಲು, ಈ ತಾಲೂಕಿನ ಸ್ಕೌಟ್ಸ್, ಗೈಡ್ಸ್ ಮಕ್ಕಳು ರಾಜ್ಯ, ರಾಷ್ಟ್ರಮಟ್ಟದಲ್ಲಿ ಪ್ರತಿಭೆ ಅನಾವರಣಗೊಳಿಸುವಂಥ ವೇದಿಕೆ ನಿರ್ಮಿಸಲು ಎಲ್ಲರೂ ಕೈಜೋಡಿಸುವುದರ ಜೊತೆಗೆ ಅಗತ್ಯ ಸಹಾಯ, ಸಹಕಾರ ನೀಡುವದಾಗಿ ಹೇಳಿದರು. ಪ್ರತಿಭಾ, ಸಂಗಮ್ಮ, ಸಹನಾ ಅವರು ತಾಲೂಕು ತರಬೇತಿ ಕೇಂದ್ರವನ್ನು ದುರಸ್ತಿಗೊಳಿಸಿ, ಆವರಣವನ್ನು ಕಾರ್ಯಕ್ರಮಕ್ಕೆ ಅಣಿಗೊಳಿಸುವ ಜವಾಬ್ದಾರಿ ವಹಿಸಿಕೊಳ್ಳುವದಾಗಿ ತಿಳಿಸಿದರು.

ಸಂಸ್ಥೆಯ ಅಧಿಕಾರಿ, ಅಧಿಕಾರೇತರ ಪದಾಧಿಕಾರಿಗಳಾದ ಬಿಜೆಪಿ ಮಹಿಳಾ ಘಟಕದ ಅಧ್ಯಕ್ಷೆ ಗೌರಮ್ಮ ಹುನಗುಂದ(ಬಲದಿನ್ನಿ), ಆರ್‌ಎಂಎಸ್‌ಯ ಆದರ್ಶ ವಿದ್ಯಾಲಯದ ಮುಖ್ಯಾಧ್ಯಾಪಕಿ ನೀಲಮ್ಮ ತೆಗ್ಗಿನಮಠ, ಶಿಕ್ಷಕರಾದ ಎಸ್.ಬಿ.ಗೋಂಗಡಿ, ಎಲ್.ಕೆ.ನದಾಫ, ಮಂಜುಳಾ ಜೆ., ವಿಜಯಲಕ್ಷ್ಮೀ ಮಾಲಿಪಾಟೀಲ, ಶಾಂತಾ ಮುತ್ತಪ್ಪನವರ್, ಬಸಮ್ಮ ಕುಂಬಾರ, ಎಸ್.ಆರ್.ಸುಲ್ಫಿ, ಎಂ.ಎಸ್.ಪಾಟೀಲ, ಪುರಸಭೆ ಪ್ರತಿನಿಧಿ ಶಿವಾನಂದ ಅಕ್ಕಿ ಮತ್ತಿತರರು ಪಾಲ್ಗೊಂಡು ಸಲಹೆ ಸೂಚನೆ ನೀಡಿದರು.

ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್.ಚವ್ಹಾಣ ಸ್ವಾಗತಿಸಿದರು. ಸಂಸ್ಥೆಯ ಖಜಾಂಚಿ ಜಿ.ಎನ್.ಹೂಗಾರ ನಿರೂಪಿಸಿದರು. ಕ್ವಾಟರ್ ಮಾಸ್ಟರ್ ಎಲ್.ಕೆ.ನದಾಫ ವಂದಿಸಿದರು.

> ರಾಜ್ಯ ಸರ್ಕಾರದ ಬಜೆಟ್ ಅಧಿವೇಶನ ಮುಗಿದ ನಂತರ ಶಾಸಕ ಎ.ಎಸ್.ಪಾಟೀಲ ನಡಹಳ್ಳಿಯವರು ಸಂಸ್ಥೆಯ ಕಾರ್ಯಕ್ರಮ ಉದ್ಘಾಟಿಸಲು ಒಪ್ಪಿಕೊಂಡಿದ್ದಾರೆ. ಹೀಗಾಗಿ ಫೆಬ್ರವರಿ ತಿಂಗಳ ಎರಡನೇ ವಾರದಲ್ಲಿ ಕಾರ್ಯಕ್ರಮ ಏರ್ಪಡಿಸಿ ಕೊರೊನಾ ಸಮಯದಲ್ಲಿ ಸಹಕರಿಸಿದ ಎಲ್ಲರನ್ನೂ ಗೌರವಿಸಲು ಸರ್ವ ಪದಾಧಿಕಾರಿಗಳು ತೀರ್ಮಾನಿಸಿದ್ದಾರೆ.
>
> ■ ಸೋಮನಗೌಡ ಬಿರಾದಾರ, ಅಧ್ಯಕ್ಷರು, ಬಿಎಸ್‌ಜಿ ಸ್ಥಳೀಯ ಸಂಸ್ಥೆ, ಮುದ್ದೇಬಿಹಾಳ.

EE SANJE, Kannada Eveneing Daily- Printed, published, Owned And Edited By T.Venkatesh, Printed at M/s. Elegant Offset Printer P
Published at No 4564/ B, Second floor, Shetty Galli, Belagavi-590 002, R.N.I. NO:KARKA

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
4

| | |
|---|---|
| ಬಟ್ಟ | 18099-42099 |
| ರಾಶಿ | 33801-45099 |
| ಚಾಲಿ | 29599-38899 |
| ಹಸಿ ಅಡಿಕೆ (ಕಾಯಿ) | 6215-6998 |
| ಹಸಿ ಅಡಿಕೆ (ಗೋಟು) | 6319-6888 |

ಸರ್ವೆ ನಂ.688/ಬಿ, ಫ್ಲಾಟ್ ನಂ.99ರಲ್ಲಿ 1 ಎಕರೆ 14 ಗುಂಟೆ ಜಾಗವನ್ನು ಶಾಸಕರು ಅತಿಕ್ರಮಣ ಮಾಡಿಕೊಂಡಿದ್ದಾರೆ

ಅವರು, ಕಬಳಿಕೆ ಮಾಡಿಕೊಂಡಿರುವ ಜಾಗವನ್ನು ಶಾಸಕರು ಗೌರವಯುತವಾಗಿ ಮಹಾನಗರ ಪಾಲಿಕೆಗೆ ಮರಳಿಸಬೇಕು

ಎಂಬುದನ್ನು ಪರಿಶೀಲಿಸುತ್ತೇನೆ' ಎಂದು ಮಹಾನಗರ ಪಾಲಿಕೆ ಆಯುಕ್ತ ಶ್ರೀಹರ್ಷ ಶೆಟ್ಟಿ 'ಪ್ರಜಾವಾಣಿ'ಗೆ ತಿಳಿಸಿದರು.

### 'ಶಾಲೆಗಳಲ್ಲಿ ಸ್ಕೌಟ್ಸ್–ಗೈಡ್ಸ್ ಆರಂಭವಾಗಲಿ'



ಮುದ್ದೇಬಿಹಾಳದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಸಭಾ ಭವನದಲ್ಲಿ ಮಂಗಳವಾರ ನಡೆದ ಸ್ಕೌಟ್ಸ್ ಮತ್ತು ಗೈಡ್ಸ್ ಪೂರ್ವಭಾವಿ ಸಭೆಯಲ್ಲಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಸೋಮನಗೌಡ ಬಿರಾದಾರ ಮಾತನಾಡಿದರು

ಮುದ್ದೇಬಿಹಾಳ: 'ತಾಲ್ಲೂಕಿನ ಪ್ರತಿ ಪ್ರಾಥಮಿಕ, ಪ್ರೌಢಶಾಲೆ ಮತ್ತು ಕಾಲೇಜಿನಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ವಿಭಾಗ ಪ್ರಾರಂಭಿಸುವ ಮೂಲಕ ಮಕ್ಕಳಿಗೆ ನಾಯಕತ್ವ ಗುಣದ ಬೆಳವಣಿಗೆಗೆ ಪ್ರೋತ್ಸಾಹ ನೀಡಬೇಕು' ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಸೋಮನಗೌಡ ಬಿರಾದಾರ ಕವಡಿಮಟ್ಟಿ ಹೇಳಿದರು.

ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಮಂಗಳವಾರ ನಡೆದ ಮುಖ್ಯ ಹಾಗೂ ಉಪ ಘಟಕಗಳ ಪದಾಧಿಕಾರಿಗಳ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

'2020-21ನೇ ಸಾಲಿಗೆ ಆಯಾ ಶಾಲೆಗಳಲ್ಲಿರುವ ದಳಗಳನ್ನು ಜನವರಿ ಅಂತ್ಯದೊಳಗೆ ನವೀಕರಿಸಿಕೊಳ್ಳಬೇಕು. ಫೆಬ್ರುವರಿ 15ರೊಳಗಾಗಿ ಹೊಸ ದಳಗಳನ್ನು ನೋಂದಣಿ ಮಾಡಿಸಿಕೊಳ್ಳಬೇಕು. ಸ್ಕೌಟ್ಸ್ ಮತ್ತು ಗೈಡ್ಸ್ ಘಟಕದ ಪ್ರಯೋಜನವನ್ನು ಎಲ್ಲ ಶಾಲೆಯವರು ಪಡೆದುಕೊಳ್ಳಬೇಕು' ಎಂದರು.

'ಫೆಬ್ರುವರಿಯ ಎರಡನೇ ವಾರದಲ್ಲಿ ಸಂಸ್ಥೆಯ ನೂತನ ಪದಾಧಿಕಾರಿಗಳ ಪದಗ್ರಹಣ, ಪಟ್ಟಣದ ವಿದ್ಯಾನಗರದಲ್ಲಿರುವ ತಾಲ್ಲೂಕು ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರದ ಉದ್ಘಾಟನೆಯನ್ನು ಶಾಸಕ ಎ.ಎಸ್. ಪಾಟೀಲ ನಡಹಳ್ಳಿ ನೆರವೇರಿಸಲಿದ್ದಾರೆ. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದವರಿಗೆ ಶಿಕ್ಷಣ ಸಚಿವರಿಂದ ಬಂದಿರುವ ಪ್ರಮಾಣ ಪತ್ರ ವಿತರಣೆ, ಕೊರೊನಾ ಅವಧಿಯಲ್ಲಿ ನೆರವು ನೀಡಿದ ದಾನಿಗಳಿಗೆ ಸನ್ಮಾನ ಮೊದಲಾದ ಕಾರ್ಯಕ್ರಮ ನಡೆಯಲಿದೆ.

ಉಪಾಧ್ಯಕ್ಷ ಮಲ್ಲಿಕಾರ್ಜುನ ಮದರಿ, ಚೇರ್ಮನ್ ಪ್ರೊ.ಎಸ್.ಎಸ್. ಹೂಗಾರ, ಡಿ.ಬಿ.ವಡವಡಗಿ, ರವಿ ನಾಯಕ, ಪುರಸಭೆ ಅಧ್ಯಕ್ಷೆ ಪ್ರತಿಭಾ ಅಂಗಡಗೇರಿ, ಪುರಸಭೆ ಸದಸ್ಯರಾದ ಸಂಗಮ್ಮ ದೇವರಳ್ಳಿ, ಸಹನಾ ಬಡಿಗೇರ ಹಾಗೂ ದೈಹಿಕ ಶಿಕ್ಷಣಾಧಿಕಾರಿ ಎಚ್.ಎಲ್.ಕರಡ್ಡಿ ಮಾತನಾಡಿದರು.

ಗೌರಮ್ಮ ಹುನಗುಂದ(ಬಲದಿನ್ನಿ), ಆದರ್ಶ ವಿದ್ಯಾಲಯದ ಮುಖ್ಯಶಿಕ್ಷಕಿ ನೀಲಮ್ಮ ತೆಗ್ಗಿನಮಠ, ಶಿಕ್ಷಕರಾದ ಎಸ್.ಬಿ.ಗೋಂಗಡಿ, ಎಲ್.ಕೆ.ನದಾಫ, ಮಂಜುಳಾ ಜೆ., ವಿಜಯಲಕ್ಷ್ಮೀ ಮಾಲಿಪಾಟೀಲ, ಶಾಂತಾ ಮುತ್ತಪ್ಪನವರ, ಬಸಮ್ಮ ಕುಂಬಾರ, ಎಸ್.ಆರ್.ಸುಲ್ಫಿ, ಎಂ.ಎಸ್.ಪಾಟೀಲ, ಶಿವಾನಂದ ಇದ್ದರು.

# M.G.V.C ARTS, COMMERCE AND SCIENCE COLLEGE, MUDDEBIHAL

## PRESS CLUB (PAPER CUTTINGS)

ಪ್ರಜಾವಾಣಿ ಶತಮಾನದ ಸಂಭ್ರಮ ಬುಧವಾರ • ಡಿಸೆಂಬರ್ 23, 2020

ತರಬೇತಿ, ಶಿಬಿರಗಳ ಮೂಲಕ ಸಾವಿರಾರು ಹೆಣ್ಣು ಮಕ್ಕಳು ಸಾಮಾಜಿಕ ಕಳಕಳಿ ಮತ್ತು ಆತ್ಮವಿಶ್ವಾಸವುಳ್ಳ ವ್ಯಕ್ತಿಗಳಾಗಿ ರೂಪುಗೊಳ್ಳಲು ನೆರವಾಗುತ್ತಿರುವ ರೇಂಜರಿಂಗ್ ಕಾರ್ಯಕ್ರಮಕ್ಕೆ ಈಗ ಶತಮಾನದ ಸಂಭ್ರಮ. ನೂರರ ಸಂದರ್ಭದಲ್ಲಿ ರೇಂಜರಿಂಗ್ ಚಟುವಟಿಕೆಗಳನ್ನು ಪರಿಚಯಿಸುವ ಪ್ರಯತ್ನ ಇಲ್ಲಿದೆ.



ಜಲ ಸಾಹಸ ಕ್ರೀಡೆಯಲ್ಲಿ

# ನೂರರ ಬೆಳಕಲ್ಲಿ 'ರೇಂಜರ್ಸ್' ಹೊಳಪು

• ಗಾಣಧಾಳು ಶ್ರೀಕಂಠ

## 'ರೇಂಜರಿಂಗ್' ಇತಿಹಾಸ

## ಸರ್ವಾಂಗೀಣ ಅಭಿವೃದ್ಧಿ





### ಸ್ಕೌಟ್ಸ್ ಮತ್ತು ಗೈಡ್ಸ್ ವಿಭಾಗಗಳು

3ರಿಂದ 5 ವರ್ಷದೊಳಗಿನ ಮಕ್ಕಳನ್ನು 'ಬನ್ನೀಸ್', 5 ರಿಂದ 10 ವರ್ಷದ ಒಳಗಿನ ಬಾಲಕರನ್ನು 'ಕಬ್' ಮತ್ತು ಬಾಲಕಿಯರನ್ನು 'ಬುಲ್ ಬುಲ್' ಎನ್ನುತ್ತಾರೆ. 10ರಿಂದ 16 ವರ್ಷದ ಒಳಗಿನ ಬಾಲಕರನ್ನು ಸ್ಕೌಟ್ ಮತ್ತು ಬಾಲಕಿಯರನ್ನು 'ಗೈಡ್' ಎನ್ನುತ್ತಾರೆ. 15ರಿಂದ 25 ವರ್ಷದೊಳಗಿರುವ ಗಂಡು ಮಕ್ಕಳನ್ನು ರೋವರ್ಸ್ ಮತ್ತು ಹೆಣ್ಣು ಮಕ್ಕಳನ್ನು ರೇಂಜರ್ಸ್ ಎನ್ನುತ್ತಾರೆ.

### ಭಾರತ, ಕರ್ನಾಟಕದಲ್ಲಿ...

### ಸಾಮಾಜಿಕ ಸೇವೆಯಲ್ಲಿ...

### ಭವಿಷ್ಯದ ಯೋಜನೆ



---

# ಮಕ್ಕಳಲ್ಲಿ ನಾಯಕತ್ವ ಗುಣ ಬೆಳೆಸಲು ಪ್ರೋತ್ಸಾಹಿಸಿ

**ಮುದ್ದೇಬಿಹಾಳ:** ತಾಲೂಕಿನ ಪ್ರತಿಯೊಂದು ಪ್ರಾಥಮಿಕ, ಪ್ರೌಢ ಮತ್ತು ಕಾಲೇಜುಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ವಿಭಾಗ ಆರಂಭಿಸಿ ಮಕ್ಕಳಿಗೆ ನಾಯಕತ್ವದ ಬೆಳವಣಿಗೆಗೆ ಪ್ರೋತ್ಸಾಹ ನೀಡಬೇಕು ಎಂದು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮುದ್ದೇಬಿಹಾಳ ಸ್ಥಳೀಯ ಸಂಸ್ಥೆ ಅಧ್ಯಕ್ಷ ಸೋಮನಗೌಡ ಬಿರಾದಾರ ಕವಡಿಮಟ್ಟಿ ಮನವಿ ಮಾಡಿದರು.

ಬಿಇಒ ಕಾರ್ಯಾಲಯ ಸಭಾಂಗಣದಲ್ಲಿ ಮಂಗಳವಾರ ನಡೆದ ಸಂಸ್ಥೆಯ ಮುಖ್ಯ ಹಾಗೂ ಉಪ ಘಟಕಗಳ ಪದಾಧಿಕಾರಿಗಳ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

2020-21ನೇ ಸಾಲಿಗೆ ಆಯಾ ಶಾಲೆಗಳಲ್ಲಿರುವ ದಳಗಳನ್ನು ಜನವರಿ ಅಂತ್ಯದೊಳಗೆ ನವೀಕರಿಸಿಕೊಳ್ಳಬೇಕು. ಫೆ. 15ರೊಳಗೆ ಹೊಸ ದಳಗಳನ್ನು ನೋಂದಣಿ ಮಾಡಿಸಿಕೊಳ್ಳಬೇಕು. ಎಲ್ಲ ಶಾಲೆಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕ ಇರುವುದು ಆಯಾ ಶಾಲೆ, ಕಾಲೇಜುಗಳಿಗೆ ಹೆಮ್ಮೆ ತಂದುಕೊಡುವಂಥದ್ದು. ಇದರ ಪ್ರಯೋಜನವನ್ನು ಎಲ್ಲ ಶಾಲೆಯವರು ಪಡೆದುಕೊಳ್ಳಬೇಕು ಎಂದರು.

ಫೆಬ್ರವರಿ ತಿಂಗಳ ಎರಡನೇ ವಾರದಲ್ಲಿ ಸಂಸ್ಥೆಯ ನೂತನ ಪದಾಧಿಕಾರಿಗಳ ಪದಗ್ರಹಣ, ಮುದ್ದೇಬಿಹಾಳ ಪಟ್ಟಣದ ವಿದ್ಯಾನಗರದಲ್ಲಿರುವ ತಾಲೂಕು ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರದ ಉದ್ಘಾಟನೆ, ಕಳೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದವರಿಗೆ ಶಿಕ್ಷಣ ಸಚಿವರಿಂದ ಬಂದಿರುವ ಪ್ರಮಾಣ ಪತ್ರ ವಿತರಣೆ, ಕೊರೊನಾ ಅವಧಿಯಲ್ಲಿ ನೆರವು ನೀಡಿದ ದಾನಿಗಳಿಗೆ ಸನ್ಮಾನ ಸೇರಿ ಹಲವು ಸಂಯುಕ್ತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.



ಮುದ್ದೇಬಿಹಾಳ: ಬಿಇಒ ಸಭಾ ಭವನದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಸೋಮನಗೌಡ ಬಿರಾದಾರ ಮಾತನಾಡಿದರು.

ಉಪಾಧ್ಯಕ್ಷ ಮಲ್ಲಿಕಾರ್ಜುನ ಮದರಿ ಮಾತನಾಡಿ, ದೊಡ್ಡಮಟ್ಟದ ಕಾರ್ಯಕ್ರಮ ಆಯೋಜಿಸಲು ತೀರ್ಮಾನಿಸಿರುವುದು ಶ್ಲಾಘನೀಯ. ತಾಲೂಕಿನಲ್ಲಿರುವ ದೊಡ್ಡ ದೊಡ್ಡ ಶಿಕ್ಷಣ ಸಂಸ್ಥೆಗಳು ಸಂಸ್ಥೆಗೆ ನೆರವಾಗಬೇಕು ಎಂದರು. ಸಂಸ್ಥೆ ಚೇರಮನ್ ಎಸ್.ಎಸ್. ಹೂಗಾರ ಮಾತನಾಡಿ, ಸಂಸ್ಥೆಗೆ ಮಹಾ ಪೋಷಕರು, ಪೋಷಕರು, ಆಜೀವ ಸದಸ್ಯರು, ಸದಸ್ಯರಾಗಲು ಇಚ್ಛಿಸುವವರು ಸಂಸ್ಥೆ ಕಾರ್ಯದರ್ಶಿ ಜಿ.ಎಚ್. ಚವ್ಹಾಣ ಅಥವಾ ಖಜಾಂಚಿ ಜಿ.ಎನ್. ಹೂಗಾರ ಅವರನ್ನು ಸಂಪರ್ಕಿಸಬೇಕು. ಎಲ್ಲ ಶಾಲೆಗಳಲ್ಲೂ ಘಟಕ ಆರಂಭಿಸಲು ಆಯಾ ಶಾಲೆಗಳ ಮುಖ್ಯಾಧ್ಯಾಪಕರಿಗೆ ಶಿಕ್ಷಣ ಇಲಾಖೆ ಅಧಿಕಾರಿಗಳು ನಿರ್ದೇಶನ ನೀಡಬೇಕು ಎಂದರು.

ಸಂಸ್ಥೆ ಉಪಾಧ್ಯಕ್ಷ ಡಿ.ಬಿ. ವಡವಡಗಿ, ರವಿ ನಾಯಕ, ಪುರಸಭೆ ಅಧ್ಯಕ್ಷೆ ಪ್ರತಿಭಾ ಅಂಗಡಗೇರಿ, ಸದಸ್ಯರಾದ ಸಂಗಮ್ಮ ದೇವರಳ್ಳಿ, ಸಹನಾ ಬಡಿಗೇರ ಹಾಗೂ ದೈಹಿಕ ಶಿಕ್ಷಣಾಧಿಕಾರಿ ಎಚ್.ಎಲ್. ಕರಡ್ಡಿ ಮಾತನಾಡಿದರು. ಸಂಸ್ಥೆ ಅಧಿಕಾರಿ, ಅಧಿಕಾರೇತರ ಪದಾಧಿಕಾರಿಗಳಾದ ಬಿಜೆಪಿ ಮಹಿಳಾ ಘಟಕದ ಅಧ್ಯಕ್ಷೆ ಗೌರಮ್ಮ ಹುನಗುಂದ (ಬಲದಿನ್ನಿ), ಆರ್‌ಎಂಎಸ್‌ಎ ಆದರ್ಶ ವಿದ್ಯಾಲಯದ ಮುಖ್ಯಾಧ್ಯಾಪಕಿ ನೀಲಮ್ಮ ತೆಗ್ಗಿನಮಠ, ಶಿಕ್ಷಕರಾದ ಎಸ್.ಬಿ. ಗೊಂಗಡಿ, ಎಲ್.ಕೆ.ನದಾಫ, ಮಂಜುಳಾ ಜೆ., ವಿಜಯಲಕ್ಷ್ಮೀ ಮಾಲಿಪಾಟೀಲ, ಶಾಂತಾ ಮುತ್ತಪ್ಪನವರ, ಬಸಮ್ಮ ಕುಂಬಾರ, ಎಸ್.ಆರ್. ಸುಲ್ಲಿ, ಎಂ.ಎಸ್. ಪಾಟೀಲ, ಪುರಸಭೆ ಪ್ರತಿನಿಧಿ ಶಿವಾನಂದ ಅಕ್ಕಿ ಸಲಹೆ ಸೂಚನೆ ನೀಡಿದರು.

ಜಿ.ಎಚ್. ಚವ್ಹಾಣ ಸ್ವಾಗತಿಸಿದರು. ಜಿ.ಎನ್. ಹೂಗಾರ ನಿರೂಪಿಸಿದರು. ಎಲ್.ಕೆ. ನದಾಫ್ ವಂದಿಸಿದರು.

paper.udayavani.com
ಉದಯವಾಣಿ Wed, 20 January 2021
https://epaper.udayavani.com/c/57852035

# M.G.V.C ARTS, COMMERCE AND SCIENCE COLLEGE, MUDDEBIHAL

## PRESS CLUB (PAPER CUTTINGS)

# ಮಾಧ್ಯಮವೂ ಕಲುಷಿತಗೊಂಡಿದೆ

## ಪತ್ರಿಕಾ ದಿನಾಚರಣೆ, ಪ್ರಶಸ್ತಿ ಪ್ರದಾನ, ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ನ್ಯಾ. ಹೆಗಡೆ

• **ಕನ್ನಡಪ್ರಭ ವಾರ್ತೆ** ಮುದ್ದೇಬಿಹಾಳ

ಸಂವಿಧಾನದ 3 ಪ್ರಮುಖ ಅಂಗಗಳಾದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ ಜೊತೆ 4ನೇ ಅಂಗ ಎನಿಸಿಕೊಂಡಿರುವ ಮಾಧ್ಯಮವೂ ಕಲುಷಿತಗೊಂಡಿದ್ದು ವಿಷಾದಪಡುವಂಥದ್ದು ಎಂದು ಮಾಜಿ ಲೋಕಾಯುಕ್ತ ನ್ಯಾ.ಸಂತೋಷ ಹೆಗಡೆ ಅವರು ಹೇಳಿದ್ದಾರೆ.

ಇಲ್ಲಿನ ಹುಡ್ಕೋದಲ್ಲಿರುವ ಟಾಪ್ ಇನ್ ಟೌನ್ ಕನ್ವೆನ್ಷನ್ ಹಾಲ್‌ನಲ್ಲಿ ಶುಕ್ರವಾರ ಕೆಜೆಯೂ ರಾಜ್ಯ, ಜಿಲ್ಲಾ, ತಾಲೂಕು ಘಟಕಗಳ ಆಶ್ರಯದಲ್ಲಿ ನಡೆದ ಪತ್ರಿಕಾ ದಿನಾಚರಣೆ, ಪ್ರಶಸ್ತಿ ಪ್ರದಾನ, ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಶಾಸಕಾಂಗದಲ್ಲಿ ಏನು ನಡೆಯುತ್ತಿದೆ ಅನ್ನೋದನ್ನು ಪ್ರಸಕ್ತ ರಾಜಕೀಯ ಬೆಳವಣಿಗೆಗಳು ಮಾಧ್ಯಮಗಳು ತಿಳಿಸಿಕೊಡುತ್ತವೆ. ಲಂಚದ ಹಾವಳಿ ಹೆಚ್ಚಾಗಿ ಲಂಚ ಕೊಟ್ಟು ಬಂದವನು ಹುದ್ದೆಗೆ ಪ್ರಾಮಾಣಿಕನಾಗಿ ಇರುವುದರ ಬದಲು ಏನ್ ಬಿಟ್ಟಿ ಬಂದಿಲ್ರಿ, ಕೊಟ್ ಬಂದೀನ ಅನ್ನೋದು ಇವತ್ತಿನ ಕಾರ್ಯಾಂಗದ ಪರಿಸ್ಥಿತಿ. ನ್ಯಾಯಾಂಗದಲ್ಲಿ ವೈಯುಕ್ತಿಕ ವಿಚಾರ ನುಸುಳಿ ವಿಳಂಬ ಧೋರಣೆ ಹೆಚ್ಚಾಗುತ್ತಿದೆ. ಮಾಧ್ಯಮದಲ್ಲಿ ಪೇಡ್ ನ್ಯೂಜ್, ಹಣ ತಗೊಂಡು ಸುಳ್ಳು ವರದಿ ಮಾಡೋದು, ಬ್ಲ್ಯಾಕ್‌ಮೇಲ್ ಪದ್ಧತಿ ವಿಜೃಂಭಿಸುತ್ತಿದೆ. ಇವೆಲ್ಲ ಪ್ರಾಮಾಣಿಕವಾಗಿ, ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕು. ಅಂದಾಗ ಮಾತ್ರ ಇವುಗಳ ಮೇಲಿನ ವಿಶ್ವಾಸ ಹೆಚ್ಚುತ್ತದೆ ಎಂದರು.

ಪೇಡ್ ನ್ಯೂಜ್, ಬ್ಲ್ಯಾಕ್‌ಮೇಲ್ ಹಾವಳಿಯನ್ನು ಮಾಧ್ಯಮ ಬಹಳ ಗಂಭೀರವಾಗಿ ಪರಿಗಣಿಸಬೇಕು. ಜನರು ತನ್ನಲ್ಲಿ ಇಟ್ಟ ಅಭಿಮಾನ, ಗೌರವ, ನಂಬಿಕೆಗಳಿಗೆ ಇಂಥವುಗಳಿಂದ ಧಕ್ಕೆ ಬರದಂತೆ ದಿಟ್ಟ ನಿರ್ಣಯ ತೆಗೆದುಕೊಳ್ಳಬೇಕು. ಸತ್ಯವನ್ನು ಒಪ್ಪಲೇಬೇಕು ಮುಚ್ಚಿ ಹಾಕುವ ಪ್ರಯತ್ನ ಮಾಡಬಾರದು. ಪ್ರಶಸ್ತಿಗಳು ಅದನ್ನು ಪಡೆಯುವಂಥ ಉತ್ತಮ ವ್ಯಕ್ತಿಗಳ ಕಾರ್ಯಕ್ಕೆ ಮೀಸಲಾಗಿರಬೇಕೆ ಹೊರತು ಬೇರೆ ಕಾರಣಕ್ಕೆ ಪ್ರಶಸ್ತಿ ಕೊಡಬಾರದು. ಒಳ್ಳೇಯವರು, ಜನರ ಪ್ರೀತಿಗೆ ಪಾತ್ರರಾದವರನ್ನು ಗುರ್ತಿಸಿ ಸನ್ಮಾನಿಸಿದರೆ ಅದು ಸನ್ಮಾನಿಸಿದ ಸಂಸ್ಥೆಯ ಗೌರವ ಎತ್ತರಮಟ್ಟಕ್ಕೆ ತಗೊಂಡು ಹೋಗುತ್ತದೆ ಎಂದರು.

**ಪ್ರಶಸ್ತಿ ಪ್ರದಾನ, ಸನ್ಮಾನ:** ಎಂಎಲ್‌ಸಿ ಹಣಮಂತ ನಿರಾಣಿ, ಅರವಿಂದ ಜಮಖಂಡಿ, ಪ್ರಶಸ್ತಿ ಪುರಸ್ಕೃತರಾದ ಜಿ.ಎಸ್.ಕಮತರ, ಸುಕನ್ಯಾ ಮಾತನಾಡಿದರು. ಜಿಪಂ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ, ಗಣ್ಯರಾದ ಮಂಗಳಾದೇವಿ ಬಿರಾದಾರ, ಎಂ.ಬಿ.ನಾವದಗಿ, ಮಲ್ಲಿಕಾರ್ಜುನ ಮದರಿ, ಡಾ.ಬಸವರಾಜ ಅಸ್ಕಿ, ಮಲ್ಲನಗೌಡ ಬಿರಾದಾರ, ಎಸ್.ಬಿ.ಚಲವಾದಿ, ಪುರಸಭೆ ಸದಸ್ಯೆ ಸಂಗಮ್ಮ ದೇವರಳ್ಳಿ, ವಕೀಲರ ಸಂಘದ ಅಧ್ಯಕ್ಷ ಎಂ.ಎಚ್.ಕ್ವಾರಿ, ಪವನ್ ಕುಲಕರ್ಣಿ, ಡಿ.ಸಿ.ಪಾಟೀಲ, ಬಿಇಒ ಎಸ್.ಡಿ.ಗಾಂಜಿ, ಮಲಕೇಂದ್ರಗೌಡ ಪಾಟೀಲ, ಜಿ.ಟಿ.ಘೋರ್ಪಡೆ, ಗಿರೀಶಗೌಡ ಪಾಟೀಲ, ಬಿ.ನಾರಾಯಣ, ಅಬ್ದುಲ್‌ಹಕೀಮ್ ಇನ್ನಿತರರು ವೇದಿಕೆಯಲ್ಲಿದ್ದರು. ಹಿರಿಯ ಪತ್ರಕರ್ತ ಜಿ.ಎಸ್.ಕಮತರಗೆ ದಿ.ಡಾ.ನಾಗರಾಜ ಜಮಖಂಡಿ ಸ್ಮರಣಾರ್ಥ ಸಾಧಕ ರತ್ನ, ಬೆಂಗಳೂರಿನ ಟಿವಿ9 ನಿರೂಪಕಿ ಸುಕನ್ಯಾಗೆ ಮಾಧ್ಯಮ ರತ್ನ ಪ್ರಶಸ್ತಿ ನೀಡಿ ಪುರಸ್ಕರಿಸಲಾಯಿತು. ಜಿಲ್ಲೆಯ ಪತ್ರಕರ್ತರಾದ ಪಿ.ವಿ.ಮುಮುದಾಪುರ, ಗುರುರಾಜ ಹೂಗಾರ, ಶುಭಾ ಹತ್ತಳ್ಳಿ ಸೇರಿ 11 ಪತ್ರಕರ್ತರನ್ನು ಸನ್ಮಾನಿಸಲಾಯಿತು.

ಸಂಗಮೇಶ ಶಿವಣಗಿ ಪ್ರಾರ್ಥಿಸಿದರು. ಪುಂಡಲಿಕ ಮುರಾಳ ಸ್ವಾಗತಿಸಿದರು. ನಾರಾಯಣ ಮಾಯಾಚಾರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿ.ಎನ್.ಹೂಗಾರ ಮತ್ತು ಶ್ರೀಶೈಲ ಹೂಗಾರ ನಿರೂಪಿಸಿದರು. ಮಂಜುನಾಥಸ್ವಾಮಿ ಕುಂದರಗಿ ವಂದಿಸಿದರು.

**ವಿದ್ಯಾರ್ಥಿಗಳೊಂದಿಗೆ ಸಂವಾದ:** ಕಾರ್ಯಕ್ರಮಕ್ಕೂ ಮುನ್ನ ನ್ಯಾ.ಸಂತೋಷ ಹೆಗಡೆ ಅವರು ಕಾಲೇಜು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಈ ವೇಳೆ ವಿದ್ಯಾರ್ಥಿಗಳ ಹಲವು ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿದರು. ಎಂಜಿವಿಸಿ ಕಾಲೇಜಿನ ಪ್ರೊ.ಎಸ್.ಎಸ್.ಹೂಗಾರ, ಸರ್ಕಾರಿ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಎನ್.ಬಿ.ಹೊಸಮನಿ ಮತ್ತಿತರರು ವೇದಿಕೆಯಲ್ಲಿದ್ದರು. ಶ್ರೀಶೈಲ ಹೂಗಾರ, ಸಿದ್ದು ಹೆಬ್ಬಾಳ ನಿರೂಪಿಸಿದರು.



ಪತ್ರಿಕಾ ದಿನಾಚರಣೆ, ಪ್ರಶಸ್ತಿ ಪ್ರದಾನ, ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ನ್ಯಾ.ಸಂತೋಷ ಹೆಗಡೆ ಉದ್ಘಾಟಿಸಿದರು. ಎಂಎಲ್‌ಸಿ ಹಣಮಂತ ನಿರಾಣಿ, ಗಣ್ಯರು ಇದ್ದಾರೆ.

- ಮುದ್ದೇಬಿಹಾಳ ಕೋರ್ಟ್‌ನ ನ್ಯಾಯಾಧೀಶರು, ವಕೀಲರು, ಬಿಇಒ ಕಚೇರಿ ಅಧಿಕಾರಿಗಳು, ಜಮಖಂಡಿ ಪರಿಹಾರ, ಕೆಜೆಯೂ ಸಂಘಟನೆ, ಜ್ಞಾನಭಾರತಿ ಶಾಲೆ ಹೀಗೆ ಹಲವರು ನ್ಯಾ.ಸಂತೋಷ ಹೆಗಡೆ ಅವರನ್ನು ಸನ್ಮಾನಿಸಿದರು.
- ಮುದ್ದೇಬಿಹಾಳ ಕೋರ್ಟ್‌ನ ಸಭಾಭವನದಲ್ಲಿ ನ್ಯಾ.ಸಂತೋಷ ಹೆಗಡೆ ಅವರನ್ನು ನ್ಯಾಯಾಧೀಶರು, ವಕೀಲರು ಸನ್ಮಾನಿಸಿದರು. ಈ ವೇಳೆ ಹೆಗಡೆ ಅವರಿಗೆ ಇಲ್ಲಿನ ನ್ಯಾಯಾಧೀಶರು 2 ನಿಂಬೆ ಹಣ್ಣು ಕೊಟ್ಟರು. ಇದು ಎಲ್ಲರನ್ನು ಚಕಿತಗೊಳಿಸಿತು. ನಂತರ ವಿಚಾರಿಸಿದಾಗ ದಕ್ಷಿಣ ಕರ್ನಾಟಕ, ಕರಾವಳಿ ಕರ್ನಾಟಕ ಭಾಗದಲ್ಲಿ ಗಣ್ಯರಿಗೆ ನಿಂಬೆ ಹಣ್ಣು ಕೊಟ್ಟು ಸ್ವಾಗತಿಸುವುದು ಸಂಪ್ರದಾಯ ಎನ್ನುವ ವಿಚಾರ ಗಮನಸೆಳೆಯಿತು.
- ಬಿಇಒ ಕಚೇರಿಗೆ ಭೇಟಿ ನೀಡಿ ಕಚೇರಿಯ ಪ್ರತಿಯೊಂದು ಕೊಠಡಿ, ಒಳಾಂಗಣ, ಹೊರಾಂಗಣ, ಉದ್ಯಾನವನ ಪರಿಶೀಲಿಸಿದ ನಿವೃತ್ತ ಲೋಕಾಯುಕ್ತ ನ್ಯಾ.ಸಂತೋಷ ಹೆಗಡೆ ಅವರು ಇಲ್ಲಿನ ವ್ಯವಸ್ಥೆ ಕಂಡು ಶ್ಲಾಘನೆ ವ್ಯಕ್ತಪಡಿಸಿದರು.

ಕನ್ನಡಪ್ರಭ Sat, 24 August 2019
https://kpepaper.asianetnews.com/c/42802403

ವಿಶ್ವವಾಣಿ

# ಮಕ್ಕಳಲ್ಲಿ ಶಿಸ್ತು, ದೇಶಭಕ್ತಿ ಬೆಳೆಸಿ: ದಮ್ಮೂರಮಠ

**ವಿಶ್ವವಾಣಿ ಸುದ್ದಿಮನೆ** ಮುದ್ದೇಬಿಹಾಳ

ತಾಲೂಕಿನ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ನೀಡುವ ಶಾಲೆಗಳಲ್ಲಿ ಕಡ್ಡಾಯವಾಗಿ ಟ್ರೂಪ್‌ಗಳನ್ನು ಪ್ರಾರಂಭಿಸುವುದರ ಜತೆಗೆ ಮಕ್ಕಳಲ್ಲಿ ಶಿಸ್ತು, ತಾಳ್ಮೆ ಮತ್ತು ದೇಶಭಕ್ತಿಯ ಮನೋಭಾವನೆಯನ್ನು ಮೂಡಿಸುವ ಕೆಲಸ ಮಾಡಬೇಕು ಎಂದು ಸಮನ್ವಯಾಧಿಕಾರಿ ಆರ್.ಬಿ.ದಮ್ಮೂರಮಠ.

ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿ ಹಮ್ಮಿಕೊಳ್ಳಲಾದ ಸ್ಕೌಟ್ಸ್ ಮತ್ತು ಗೈಡ್ಸ್ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾದ ಪ್ರಾರಂಭಿಕ ಮಾಹಿತಿ ಶಿಬಿರ ಮತ್ತು ಪುನಶ್ಚೇತನ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೈಹಿಕ ಶಿಕ್ಷಣಾಧಿಕಾರಿ ಎಚ್.ಎಲ್.ಕರಡ್ಡಿ ಮಾತನಾಡಿ, ನಮ್ಮ ತಾಲೂಕು ಸ್ಕೌಟ್ಸ್ ಗೈಡ್ಸ್‌ನಲ್ಲಿ ಮುಂಚೂಣಿಯಲ್ಲಿದೆ. ಎಲ್ಲ ಮುಖ್ಯ ಗುರುಗಳು ತಮ್ಮ ಶಾಲೆಯಲ್ಲಿ ಕಡ್ಡಾಯವಾಗಿ ಒಬ್ಬ ಸ್ಕೌಟ್ಸ್ ಮಾಸ್ಟರ್ ಒಬ್ಬರು ಗೈಡ್ಸ್ ಕ್ಯಾಪ್ಟನ್ ತರಬೇತಿ ಹೊಂದಿದವರು ಇರಲೇಬೇಕು ಇರದೇ ಇದ್ದರೆ ಕಡ್ಡಾಯವಾಗಿ ಒಬ್ಬರು ತರಬೇತಿ ಪಡೆಯಲು ಕಳುಹಿಸಬೇಕು ಎಂದು ಹೇಳಿದರು.

ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಡಿ.ಬಿ.ವಡವಡಗಿ ಮಾತನಾಡಿ, ಮಕ್ಕಳು ನಾಲ್ಕು ಗೋಡೆಗಳ ನಡುವೆ ಓದು-ಬರೆಹಗಳನ್ನು ಕಲಿಯುವದರ ಜತೆಗೆ, ನಿಸರ್ಗದ ಮಡಿಲಲ್ಲಿ ಒಂದಾಗಿ ಬೆರೆತು, ಸಮನ್ವಯದಿಂದ ಬಾಳಲು ಕಲಿಯುವಂತೆ ಪ್ರೇರೇಪಿಸಲಿರುವ ಕಾರ್ಯಕ್ರಮವೇ ಸ್ಕೌಟ್ ಮತ್ತು ಗೈಡ್ ಚಳವಳಿಯ ಮೂಲ ಉದ್ದೇಶ ಎಂದು ಹೇಳಿದರು

ಜಿಲಾ ಸಂಸ್ಥೆಯ ರಾಜ್ಯ ಸಂಘಟನಾ ಆಯುಕ್ತರಾದ ನಾಗೇಶ ಶಿವಪೂರ, ಶಿಕ್ಷಣ ಸಂಯೋಜಕ ಎ. ಎಸ್.ಭಾಗವಾನ ಮಾತನಾಡಿದರು.

ಸ್ಥಳೀಯ ಸಂಸ್ಥೆಯ ಚೇರಮನ್ನರಾದ ಪ್ರೊ.ಎಸ್.ಎಸ್.ಹೂಗಾರ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಶಿಕ್ಷಣ ಸಂಯೋಜಕ ಎಸ್.ಎಚ್.ಮೇಟಿ, ಕಾರ್ಯದರ್ಶಿ ದತ್ತು ಕಠಾರೆ, ಎಲ್.ಕೆ.ನದಾಫ ಇದ್ದರು.




ಮುದ್ದೇಬಿಹಾಳದಲ್ಲಿ ಹಮ್ಮಿಕೊಂಡಿದ್ದ ಪ್ರಾರಂಭಿಕ ಮಾಹಿತಿ ಶಿಬಿರ ಮತ್ತು ಪುನಶ್ಚೇತನ ತರಬೇತಿ ಕಾರ್ಯಕ್ರಮವನ್ನು ಸಮನ್ವಯಾಧಿಕಾರಿ ಆರ್.ಬಿ.ದಮ್ಮೂರಮಠ ಉದ್ಘಾಟಿಸಿದರು.

# M.G.V.C ARTS, COMMERCE AND SCIENCE COLLEGE, MUDDEBIHAL

## PRESS CLUB (PAPER CUTTINGS)






ಕನ್ನಡಪ್ರಭ

# ಕ್ರೀಡೆಗಳಲ್ಲಿ ಸೋಲು ಗೆಲುವು ಸಾಮಾನ್ಯ

## ಎಂಜಿವಿಸಿ ಕಾಲೇಜಿನಲ್ಲಿ ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆ ಉದ್ಘಾಟನೆ | ಶಾಸಕ ನಡಹಳ್ಳಿ ಅಭಿಮತ

• **ಕನ್ನಡಪ್ರಭ ವಾರ್ತೆ** ಮುದ್ದೇಬಿಹಾಳ

ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ಸೋತವರು ನಿರಾಶರಾಗದೆ ಸೋಲು ಗೆಲುವಿಗೆ ಮೆಟ್ಟಿಲು ಎನ್ನುವುದನ್ನು ಅರಿತುಕೊಂಡು ಖುಷಿಯಾಗಿ ಬಾಳಬೇಕು ಎಂದು ಶಾಸಕ ಎ.ಎಸ್.ಪಾಟೀಲ ನಡಹಳ್ಳಿ ಹೇಳಿದ್ದಾರೆ.

ಇಲ್ಲಿನ ಮಾತೋಶ್ರೀ ಗಂಗಮ್ಮ ವೀರಪ್ಪ ಚಿನಿವಾರ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಸೋಮವಾರ ಏರ್ಪಡಿಸಿದ್ದ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಉದ್ಘಾಟನೆ, ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳ ಭವಿಷ್ಯ ಉಜ್ವಲಗೊಳ್ಳಲು ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳು ಬಹಳಷ್ಟು ಕೊಡುಗೆ ನೀಡುತ್ತವೆ. ಪ್ರತಿಯೊಂದು ಶಾಲೆ, ಕಾಲೇಜಿನಲ್ಲಿ ಇಂಥ ಚಟುವಟಿಕೆಗಳು ನಿರಂತರ ನಡೆಯಬೇಕು. ವಿದ್ಯಾರ್ಥಿಗಳು ಈ ಚಟುವಟಿಕೆಗಳ ಜೊತೆಗೆ ಪಠ್ಯದ ಕಡೆಗೂ ಹೆಚ್ಚು ಗಮನ ಹರಿಸಿ ಓದಿನಲ್ಲಿ ಹಿಂದುಳಿಯದಂತೆ ನೋಡಿಕೊಳ್ಳಬೇಕು ಎಂದರು.

ಬಿಎ, ಬಿಎಸ್ಸಿ, ಬಿಕಾಂ ವರ್ಗಗಳ ಜೊತೆಗೆ ಭವಿಷ್ಯ ರೂಪಿಸುವ, ಸ್ವಯಂ ಉದ್ಯೋಗಕ್ಕೆ ಆಸ್ಪದ ನೀಡುವ ತರಬೇತಿಗಳನ್ನು ಕೊಡಲು ಕಾಲೇಜುಗಳ ಆಡಳಿತ ಮಂಡಳಿ ಮುಂದಾಗಬೇಕು ಎಂದ ಶಾಸಕರು, ಸ್ಕಿಲ್ ಡೆವೆಲಪ್‌ಮೆಂಟ್ ಬಗ್ಗೆ ಹೆಚ್ಚಿನ ಮಹತ್ವ ಕೊಟ್ಟು ಪದವಿ ಮುಗಿಸಿ ಹೊರಹೋಗುವ ವಿದ್ಯಾರ್ಥಿಗಳನ್ನು ಸ್ವಯಂ ಉದ್ಯೋಗ ಕೈಗೊಳ್ಳಲು ಸಮರ್ಥರನ್ನಾಗಿ ರೂಪಿಸಬೇಕು ಎಂದರು.

ನಿವೃತ್ತ ಪ್ರಾಂಶುಪಾಲ ಡಾ.ಬಲವಂತ ಉಣ್ಣೀಭಾವಿ (ಪೊಲೀಸ್‌ಪಾಟೀಲ), ಸನ್ಮಾನ ಸ್ವೀಕರಿಸಿದ ಕಾಲೇಜಿನ ಆಡಳಿತ ಮಂಡಳಿ ಕಾಯಾಧ್ಯಕ್ಷ ಅಶೋಕ ತಡಸದ, ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ನೂತನ ಪ್ರಾಂಶುಪಾಲ ಡಾ.ಬಿ.ಜಿ.ಅಸ್ಕಿ ಅವರು ವಿದ್ಯಾರ್ಥಿಗಳಲ್ಲಿ ಸಾಂಸ್ಕೃತಿಕ ಮತ್ತು ಕ್ರೀಡಾ ಬೆಳವಣಿಗೆ, ಕಾಲೇಜಿನ ಕೊಡುಗೆ ಕುರಿತು ಮಾತನಾಡಿದರು.

ಎಂ.ಎಸ್.ಪಾಟೀಲ, ಡಾ.ಪಿ.ಎಚ್.ಉಪ್ಪಲದಿನ್ನಿ, ಎಚ್.ಬಿ.ಪಾಟೀಲ, ಡಾ.ಎ.ಎ.ಮುಲ್ಲಾ, ಪುರಸಭೆ ಸದಸ್ಯ ಶರಣು ಬೂದಿಹಾಳಮಠ, ತಾಲೂಕು ಬಿಜೆಪಿ ಮಾಜಿ ಅಧ್ಯಕ್ಷ ಪರಶುರಾಮ ಪವಾರ, ಎಂಜಿವಿಸಿ ಸಂಸ್ಥೆ ಅಡಿ ನಡೆಯುವ ಎಲ್ಲ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕ ಸಿಬ್ಬಂದಿ, ಪದವಿ ವಿದ್ಯಾರ್ಥಿಗಳು ಸೇರಿದಂತೆ ಹಲವರು ಇದ್ದರು.

ಶಾಸಕರಾದ ಮೇಲೆ ಕಾಲೇಜಿಗೆ ಮೊದಲ ಬಾರಿ ಭೇಟಿ ನೀಡಿದ್ದ ಶಾಸಕ ನಡಹಳ್ಳಿ, ಹುಬ್ಬಳ್ಳಿಯ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯಿಂದ ವಾಣಿಜ್ಯ ರತ್ನ ಪ್ರಶಸ್ತಿ ಪಡೆದ ಉದ್ಯಮಿ, ಕಾಲೇಜಿನ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ತಡಸದ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಮದಿನಾ ಚಪ್ಪರಬಂಡ, ಡಾ.ಎ.ಎ.ಮುಲ್ಲಾ ಪ್ರಾರ್ಥಿಸಿದರು. ಡಾ.ಪಿ.ಎಚ್.ಉಪ್ಪಲದಿನ್ನಿ ಸ್ವಾಗತಿಸಿದರು. ಡಾ.ಆರ್.ಎಚ್.ಸಜ್ಜನ ನಿರೂಪಿಸಿದರು. ದೈಹಿಕ ನಿರ್ದೇಶಕ ಎಚ್.ಜಿ.ಪಾಟೀಲ ವಂದಿಸಿದರು.

ಮುದ್ದೇಬಿಹಾಳದ ಎಂಜಿವಿಸಿ ಕಾಲೇಜಿನಲ್ಲಿ ನಡೆದ ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆ ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಶಾಸಕ ನಡಹಳ್ಳಿ ಉದ್ಘಾಟಿಸಿದರು.

Vijapura Edition
7 Aug, 2018 Page No. 1
Powered by : eReleGo.com

# M.G.V.C ARTS, COMMERCE AND SCIENCE COLLEGE, MUDDEBIHAL

## PRESS CLUB (PAPER CUTTINGS)

ಕನ್ನಡಪ್ರಭ

# ಶಿಸ್ತುಬದ್ಧ ಜೀವನಕ್ಕೆ ಸ್ಕೌಟ್ಸ್, ಗೈಡ್ಸ್ ಅಗತ್ಯ

## ವಿಶ್ವಯೋಗ ದಿನ ನಿಮಿತ್ತ ಯೋಗ ಶಿಬಿರ, ಸನ್ಮಾನ ಕಾರ್ಯಕ್ರಮ

• **ಕನ್ನಡಪ್ರಭ ವಾರ್ತೆ** ಮುದ್ದೇಬಿಹಾಳ

ಸ್ಕೌಟ್ಸ್ ಮತ್ತು ಗೈಡ್ಸ್ ಸಮಾಜದಲ್ಲಿ ಶಿಸ್ತು ಮೂಡಿಸುತ್ತದೆ. ಪ್ರತಿ ಶಾಲೆಯಲ್ಲೂ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಘಟಕಗಳು ಪ್ರಾರಂಭಗೊಳ್ಳಬೇಕು ಎಂದು ಶಾಸಕ ಎ.ಎಸ್.ಪಾಟೀಲ ನಡಹಳ್ಳಿ ಹೇಳಿದರು.

ಇಲ್ಲಿನ ಸಂತ ಕನಕದಾಸ ಶಾಲೆಯಲ್ಲಿ ಮುದ್ದೇಬಿಹಾಳ ತಾಲೂಕು ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆಯಿಂದ ಶನಿವಾರ ಏರ್ಪಡಿಸಿದ್ದ ವಿಶ್ವಯೋಗ ದಿನ ಹಿನ್ನೆಲೆ ಮಕ್ಕಳಿಗೆ ಯೋಗ ತರಬೇತಿ ಶಿಬಿರ ಮತ್ತು ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸ್ಥಳೀಯ ಸಂಸ್ಥೆ ಉಪಾಧ್ಯಕ್ಷ ಡಿ.ಬಿ.ವಡವಡಗಿ ಮಾತನಾಡಿ, ಈ ತಾಲೂಕಿನಲ್ಲಿ ಸ್ಕೌಟ್ಸ್, ಗೈಡ್ಸ್ ಮಕ್ಕಳು ರಾಷ್ಟ್ರಮಟ್ಟದ ಸಾಧನೆ ಮಾಡಿದ್ದರ ಬಗ್ಗೆ ಹೇಳಿ ಸಂಸ್ಥೆ ಚಟುವಟಿಕೆ ನಡೆಸಲು ಪುರಸಭೆಯಿಂದ ನಿವೇಶನ ಮತ್ತು ಬಡ ಮಕ್ಕಳಿಗೆ ಸಮವಸ್ತ್ರದ ಅವಶ್ಯಕತೆ ಕುರಿತು ಶಾಸಕರ ಗಮನ ಸೆಳೆದಾಗ, ನಿವೇಶನ ಕುರಿತು ಪುರಸಭೆ ಆಡಳಿತದೊಂದಿಗೆ ಚರ್ಚಿಸುವ ಮತ್ತು ಸಮವಸ್ತ್ರ ಪೂರೈಸುವ ಕುರಿತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನಿಸುವ ಭರವಸೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಸ್ಥಳೀಯ ಸಂಸ್ಥೆ ಅಧ್ಯಕ್ಷ ಗಂಗಾಧರರಾವ್ ನಾಡಗೌಡ(ಮುನ್ನಾಧಣಿ) ಮಾತನಾಡಿ, ಸಂಸ್ಥೆ ಕ್ರಿಯಾಶೀಲವಾದಲ್ಲಿ ಸ್ಕೌಟ್ಸ್, ಗೈಡ್ಸ್ ಚಟುವಟಿಕೆಗಳು ಹೆಚ್ಚೆಚ್ಚು ನಡೆಯುತ್ತವೆ. ಇನ್ನು ಮುಂದೆ ತಿಂಗಳಿಗೊಮ್ಮೆಯಾದರೂ ಸಂಸ್ಥೆ ಸಭೆ ನಡೆಸಿ ಸ್ಕೌಟ್ಸ್, ಗೈಡ್ಸ್ ಪ್ರಗತಿ ಪರಿಶೀಲಿಸಿ ಪ್ರೋತ್ಸಾಹಿಸುವ ಕೆಲಸ ಮಾಡಬೇಕು ಎಂದರು.



ಮುದ್ದೇಬಿಹಾಳದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ನಡೆದ ವಿಶ್ವಯೋಗ ದಿನ ಕಾರ್ಯಕ್ರಮವನ್ನು ಶಾಸಕ ನಡಹಳ್ಳಿ ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿದರು.

ಸ್ಥಳೀಯ ಸಂಸ್ಥೆ ಉಪಾಧ್ಯಕ್ಷೆ ಗಿರಿಜಾ ಕಡಿ, ಚೇರ್ಮನ್ ಪ್ರೊ.ಎಸ್.ಎಸ್.ಹೂಗಾರ ಮಾತನಾಡಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಡಿ.ಗಾಂಜಿ, ಕ್ಷೇತ್ರ ಸಮನ್ವಯಾಧಿಕಾರಿ ಎಂ.ಎಂ.ಬೆಳಗಲ್ಲ, ದೈಹಿಕ ಶಿಕ್ಷಣಾಧಿಕಾರಿ ಎಸ್.ಬಿ.ಚಲವಾದಿ, ಬಿಜೆಪಿ ಧುರೀಣರಾದ ಸಂಗಮ್ಮ ದೇವರಳ್ಳಿ, ಮಲಕೇಂದ್ರಗೌಡ ಪಾಟೀಲ, ಸಂತ ಕನಕದಾಸ ಶಾಲೆ ಆಡಳಿತ ಮಂಡಳಿ ಅಧ್ಯಕ್ಷ ಬಿ.ಎಸ್.ಮೇಟಿ, ಶಾಲೆ ಆಡಳಿತಾಧಿಕಾರಿ ಎಸ್.ಎಸ್.ಶಾಣೇದ, ತಾಲೂಕು ಕುರುಬರ ಸಂಘದ ಉಪಾಧ್ಯಕ್ಷ ಎಂ.ಎನ್.ಮದರಿ, ಯೋಗಗುರುಗಳಾದ ಪ್ರಭಾಕರ ಪದಕಿ, ವಾಮನರಾವ್ ನಾಯಕ ಇದ್ದರು.

ಮಕ್ಕಳಿಗೆ ಯೋಗ ತರಬೇತಿ ನೀಡಿದ ಯೋಗಗುರುಗಳಾದ ವಾಮನರಾವ್ ನಾಯಕ, ಪ್ರಭಾಕರ ಪದಕಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಡಿ.ಗಾಂಜಿ ಅವರನ್ನು ಗೌರವಿಸಲಾಯಿತು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ದತ್ತು ಕಠಾರೆ ಸ್ವಾಗತಿಸಿದರು. ಸಂಸ್ಥೆ ಖಜಾಂಚಿ ಗೋಪಾಲ ಹೂಗಾರ ನಿರೂಪಿಸಿ, ವಂದಿಸಿದರು.

Vijapura Edition
24 Jun, 2018 Page No. 1
Powered by : erelego.com

# ಐದು ಸಾವಿರ ರೂ.ನಗದು ಬಹುಮಾನ: ರಾಜ್ಯಮಟ್ಟದ ಪ್ರಬಂಧಯಲ್ಲಿ ಸುಷ್ಮಿತಾ ಶೆಟ್ಟರ್ ಪ್ರಥಮ




ಮುದ್ದೇಬಿಹಾಳ : ಸ್ಥಳೀಯ ಎಂ.ಜಿ.ವಿ.ಸಿ ಮಹಾವಿದ್ಯಾಲಯದ ವತಿಯಿಂದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ವಿದ್ಯಾರ್ಥಿನಿ ಸುಷ್ಮಿತಾ ಶೆಟ್ಟರ್ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ.

ಕೊರೊನಾ ಹೋರಾಟಗಾರರು : ಸೇವೆ ಮತ್ತು ಸವಾಲುಗಳು ಎಂಬ ವಿಷಯದ ಕುರಿತಾಗಿ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿತ್ತು.ಈ ವೇಳೆ ವಿಜೇತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ವಿತರಣೆ ಮಾಡಿ ಮಾತನಾಡಿದ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ ಎ.ಬಿ ಕುಲಕರ್ಣಿ ಅವರು, ಲಾಕ್‌ಡೌನ್ ಸಂದರ್ಭದಲ್ಲಿ ವಿದ್ಯಾರ್ಥಿಗಳ ಕ್ರಿಯಾಶೀಲತೆ ಹಾಗೂ ಸಾಮರ್ಥ್ಯ ಹೆಚ್ಚಳಕ್ಕಾಗಿ ನಮ್ಮ ಸಂಸ್ಥೆಯ ವತಿಯಿಂದ ಪ್ರೋತ್ಸಾಹ ರೂಪದಿಂದ ಬಹುಮಾನ ನಿಗದಿಪಡಿಸಲಾಗಿತ್ತು. ರಾಜ್ಯಮಟ್ಟದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ಒಳ್ಳೆಯ ರೀತಿಯಿಂದ ಸ್ಪರ್ಧೆಯನ್ನು ಕೊಟ್ಟಿದ್ದಾರ ಎಂದರು.

ಪ್ರಥಮ ಬಹುಮಾನ ಪಡೆದ ಸುಷ್ಮಿತಾ ಶೆಟ್ಟರ್ ಅವರಿಗೆ ಐದು ಸಾವಿರ ರೂಗಳ ಚೆಕ್ ವಿತರಿಸಲಾಯಿತು. ಎರಡನೇ ಸ್ಥಾನ ಸಿ.ಎಸ್.ಬಿ ಕಾಲೇಜು ರಾಮದುರ್ಗದ ಮಸ್ತಾನ್ ಮುಲ್ಲಾ. ಬಿವಿವಿ ಪದವಿ ವಿಜ್ಞಾನ ಮಹಾವಿದ್ಯಾಲಯ ಬಾಗಲಕೋಟೆಯ ಕಾವ್ಯ ಯಂಕಂಚಿ ಪಡೆದುಕೊಂಡಿದ್ದಾರೆ.

ಬಾಗಲಕೋಟೆಯ ಸೌಭಾಗ್ಯ ಉಂಕಿ, ಸವದತ್ತಿಯ ರಕ್ಷಿತಾ ವಾಡೆಕರ್ ಸಮಾಧಾನಕರ ಬಹುಮಾನ ಪಡೆದಿದ್ದಾರೆ. ನ್ಯಾಕ್ ಸಂಯೋಜಕ ಡಾ. ಬಿ.ಎ ಗೂಳಿ. ಎಸ್ ಎನ್ ಪೋಲೇಶಿ. ಎಚ್ ಜಿ.ಪಾಟೀಲ್. ಎಂ \.ಐ ಬಿರಾದಾರ ರವೀಂದ್ರ, ನಂದೆಪ್ಪನವರ,ಡಾ.ಪ್ರಕಾಶ ನರಗುಂದ ಇದ್ದರು.

**M.G.V.C ARTS, COMMERCE AND SCIENCE COLLEGE, MUDDEBIHAL**

**PRESS CLUB (PAPER CUTTINGS)**

ವಿಶ್ವವಾಣಿ

# ಪಠ್ಯೇತರ ಚಟುವಟಿಕೆಯಿಂದ ವ್ಯಕ್ತಿತ್ವ ವಿಕಸನ: ಪ್ರಾಧ್ಯಾಪಕ

**ಗುಳೇದಗುಡ್ಡ:** ವ್ಯಕ್ತಿತ್ವ ವಿಕಸನಕ್ಕೆ ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಗಳಿಗೆ ಅವಶ್ಯಕವಾಗಿದ್ದು, ಹೊಸ ಶಿಕ್ಷಣ ನೀತಿಯಲ್ಲಿ ಇದಕ್ಕೆ ಹೆಚ್ಚಿನ ಅವಕಾಶ ಕಲ್ಪಿಸಲಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು ಎಂದು ಮುದ್ದೇಬಿಹಾಳದ ಎಂ.ಜಿ.ವಿ.ಸಿ. ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ. ಪ್ರಕಾಶ ನರಗುಂದ ಹೇಳಿದರು.

ಅವರು ಶನಿವಾರ ಭಂಡಾರಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಪಠ್ಯೇತರ ಚಟುವಟಿಕೆಗಳ ಸಮಾರೋಪ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದಲ್ಲಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಅಮಾತೆಪ್ಪ ಕೊಪ್ಪಳ, ಪ್ರಾಚಾರ್ಯ ಎನ್.ವೈ. ಬಡನ್ನವರ, ಪಿಯು ಕಾಲೇಜಿನ ಪ್ರಾಚಾರ್ಯ ಸಿದ್ದಲಿಂಗಪ್ಪ ಬರಗುಂಡಿ, ಡಾ. ಸಣ್ಣೀರ ದೊಡಮನಿ, ಸಂಗಮೇಶ ಚಿಕ್ಕಾಡಿ, ಎಂ.ಎಂ. ಪಾಟೀಲ, ಡಾ. ಯಾದವರಾಜ ಸಂಗಮೇಶ ಭದ್ರಣ್ಣವರ, ಡಾಬಿ.ಎಸ್. ಚವಡಿ, ಬಿ.ಯು. ಹಣಗಿ, ಡಾ. ಸುರೇಖಾ ಯಂಡಿಗೇರಿ ಮತಿತರರು ಇದ್ದರು.



# M.G.V.C ARTS, COMMERCE AND SCIENCE COLLEGE, MUDDEBIHAL

## PRESS CLUB (PAPER CUTTINGS)

ಉದಯವಾಣಿ

### ಕೃತಿ ಲೋಕಾರ್ಪಣೆ ಇಂದು

**ಮುದ್ದೇಬಿಹಾಳ:** ಪಟ್ಟಣದ ಎಂಜಿವಿಸಿ ಕಾಲೇಜಿನಲ್ಲಿ ಆ. 19ರಂದು ಬೆಳಗ್ಗೆ 10:30ಕ್ಕೆ ಎಂಜಿವಿಸಿ ಪದವಿ ಮಹಾವಿದ್ಯಾಲಯದ ಕನ್ನಡ ಪ್ರಾಧ್ಯಾಪಕ, ಸಾಹಿತಿ ಡಾ| ಪ್ರಕಾಶ ನರಗುಂದ ಅವರ ಸಂಪಾದನಾ ಕೃತಿ ಮುತ್ತಿನ ತೆನೆ ಲೋಕಾರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಎಸ್‌ಜಿವಿಸಿ ಟ್ರಸ್ಟ್ ಕಾರ್ಯದರ್ಶಿ ಅಶೋಕ ತಡಸದ ಕೃತಿ ಲೋಕಾರ್ಪಣೆ ಮಾಡುವರು. ಕಾಲೇಜಿನ ಪ್ರಾಚಾರ್ಯ ಎಸ್.ಎನ್. ಪೋಲೇಶಿ ಅಧ್ಯಕ್ಷತೆ ವಹಿಸುವರು. ಶಿಕ್ಷಕ ಬಿ.ಎಸ್. ಹಂಚಲಿ ಕೃತಿ ಅವಲೋಕನ ನಡೆಸಿಕೊಡುವರು. ಕಾಲೇಜಿನ ಆಡಳಿತಾಧಿಕಾರಿಗಳಾದ ಎ.ಬಿ. ಕುಲಕರ್ಣಿ, ಗ್ರಂಥ ಸಂಪಾದಕ ಡಾ| ಪ್ರಕಾಶ ನರಗುಂದ, ಪ್ರೊ| ಎಸ್.ಎಸ್. ಹೂಗಾರ, ಡಾ| ಎಸ್.ಬಿ. ಜಾಧವ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

### ಪುಸ್ತಕ ಓದುವ ಸಂಸ್ಕೃತಿ ಬೆಳೆಯಲಿ

<u>**ತಾಳಿಕೋಟಿ ಟೈಮ್ಸ್ ನ್ಯೂಸ್**</u>

**ಮುದ್ದೇಬಿಹಾಳ** : ಆಧುನಿಕ ತಂತ್ರಜ್ಞಾನದ ನವಮಾಧ್ಯಮಗಳ ಯುಗದಲ್ಲಿ ಪುಸ್ತಕ ಓದುವ ಪ್ರವೃತ್ತಿ ಕಡಿಮೆಯಾಗುತ್ತಿರುವುದು ಕಳವಳಕಾರಿ ಸಂಗತಿ ಎಂದು ಎಸ್.ಜಿ.ವ್ಹಿ.ಸಿ ಟ್ರಸ್ಟ್ ಕಾರ್ಯದರ್ಶಿ ಅಶಫಕ ತಡಸದ ಹೇಳಿದರು.

ಪಟ್ಟಣದ ಎಂ.ಜಿ.ವಿ.ಸಿ ಕಾಲೇಜಿನಲ್ಲಿ ಗುರುವಾರ ಸಾಹಿತಿ ಡಾ. ಪ್ರಕಾಶ ಎನ್.ನರಗುಂದ ಸಂಪಾದಿತ ಕೃತಿ "ಮುತ್ತಿನ ತೆನೆ" ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ಓದುವ ಸಂಸ್ಕೃತಿ ಹೆಚ್ಚಿಸುವುದಕ್ಕೆ ಆದ್ಯತೆ ನೀಡಬೇಕಿದೆ. ಜನ್ಮದಿನಾಚರಣೆ,ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಪುಸ್ತಕಗಳನ್ನು ಉಡುಗೊರೆ ರೂಪದಲ್ಲಿ ನೀಡು ವ ಪದ್ಧತಿ ಹೆಚ್ಚು ಆಚರಣೆಯಲ್ಲಿ ಬರಬೇಕಿದೆ ಎಂದರು. ನಿಡಗುಂದಿಯ ಚಿಂತಕ ಬಸವರಾಜ ಹಂಚಲಿ ಮಾತನಾಡಿ,ಡಾ.ಪ್ರಕಾಶ ನರಗು ಂದ ಅವರ ಸಂಶೋಧನಾ ಮನೋಭಾವ,ಸತ್ಯಶೋಧಕ ಗುಣದಿಂದ ಮೌಲ್ಯಯುತ ಕೃತಿಯನ್ನು ಹೊರ ತಂದಿದ್ದಾರೆ ಎಂದರು. ಆಡಳಿತಾಧಿಕಾರಿ ಎ.ಬಿ.ಕುಲ ಕರ್ಣಿ,ಪುಸ್ತಕದ ಲೇಖಕ ಡಾ.ಪ್ರಕಾಶ ಎನ್ ನರಗು ಂದ, ಅಧ್ಯಕ್ಷತೆ ವಹಿಸಿದ್ದ ಎಸ್. ಎನ್. ಪೋಲೇಶಿ ಮಾತನಾಡಿದರು.



**ಮುದ್ದೇಬಿಹಾಳ ಪಟ್ಟಣದ ಎಂಜಿವಿಸಿ ಕಾಲೇಜಿನಲ್ಲಿ ಡಾ.ಪ್ರಕಾಶ ನರಗುಂದ ಸಂಪಾದಿತ ಮುತ್ತಿನ ತೆನೆ ಪುಸ್ತಕವನ್ನು ಲೋಕಾರ್ಪಣೆಗೊಳಿಸಲಾಯಿತು.ಎಸ್.ಜಿ.ವಿ.ಸಿ ಟ್ರಸ್ಟ್ ಅಧ್ಯಕ್ಷ ಅಶೋಕ ತಡಸದ,ಎ.ಬಿ.ಕುಲಕರ್ಣಿ,ಎಸ್.ಎಸ್.ಹೂಗಾರ,ಡಾ.ಪ್ರಕಾಶ ನರಗುಂದ,ಬಸವರಾಜ ಹಂಚಲಿ ಮೊದಲಾದವರು ಇದ್ದರು.**

ಕಾರ್ಯಕ್ರಮದಲ್ಲಿ ಬಿ.ಎಸ್.ಹಂಚಲಿ, ಡಾ.ಪ್ರಕಾಶ ನರಗುಂದ ಅವರನ್ನು ಸನ್ಮಾನಿಸಲಾಯಿತು.

ಪ್ರೊ. ಎಸ್.ಎಸ್.ಹೂಗಾರ ನಿರೂಪಿಸಿದರು. ವ್ಹಿ.ಎಸ್.ಲಮಾಣಿ ಸ್ವಾಗತಿಸಿದರು.ಡಾ.ಎಸ್.ಬಿ.ಜಾಧವ ವಂದಿಸಿದರು.

# M.G.V.C ARTS, COMMERCE AND SCIENCE COLLEGE, MUDDEBIHAL

## PRESS CLUB (PAPER CUTTINGS)

ಗುಮ್ಮಟ ನಗರಿ ಪ್ರಾದೇಶಿಕ ಕನ್ನಡ ದಿನಪತ್ರಿಕೆ

### ಕಲೆಗಳನ್ನು ಉಳಿಸುವ ಕೆಲಸ ನಡೆಯಲಿ

ಗುಮ್ಮಟ ನಗರಿ ನ್ಯೂಸ್>> ಮುದ್ದೇಬಿಹಾಳ ಫೆ.07: ಕಲೆ ಎಂಬುದು ಎಲ್ಲರಲ್ಲಿ ಅಗೋಚರವಾಗಿ ಇರುವಂಥದು. ಅದನ್ನು ಹುಡುಕಿ ತೆಗೆದು. ಅದು ಪ್ರಕಾಶಿಸುವಂತೆ ಮಾಡುವ ಕೆಲಸವನ್ನು ಸಂಘ. ಸಂಸ್ಥೆಗಳು ಮಾಡಬೇಕು ಎಂದು ಪಟ್ಟಣದ ಮುಖ್ಯ ಅಂಚೆ ಕಚೇರಿ ಪೋಸ್ಟ ಮಾಸ್ಟರ್ ಮಹಾಬಲೇಶ್ವರ ಗಡೇದ ಹೇಳಿದರು.

ಅವರು ಪಟ್ಟಣದ ಎಂ.ಜಿ.ವಿ.ಸಿ. ಮಹಾವಿದ್ಯಾಲಯದಲ್ಲಿ ಶನಿವಾರ ಕಲಾ ವೇದಿಕೆ (ಆರ್ಟ್ಸ ಕ್ಲಬ್) ಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕ್ಲಬ್‌ಗಳ ಮೂಲಕ ನಾವು ಅನೇಕ ಜನೋಪಯೋಗಿ ಕೆಲಸಗಳನ್ನು ಮಾಡಲು ಸಾಧ್ಯ.. ಪರಿಸರ ಸಂರಕ್ಷಣೆ. ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವಿಕೆ. ಪುಸ್ತಕಗಳನ್ನು ಓದುವ ಹವ್ಯಾಸ. ಗ್ರಾಮೀಣ ಕ್ರೀಡೆಗಳನ್ನು ಉಳಿಸುವ ಚಟುವಟಿಕೆಗಳು. ನೇತ್ರದಾನ. ರಕ್ತದಾನ. ಅನ್ನದಾನ. ವಿದ್ಯಾದಾನ ಸೇರಿದಂತೆ ಅನೇಕ ಬಡವರಿಗೆ ಸಹಾಯವಾಗುವಂಥ ನೆರವು ಕಾರ್ಯಕ್ರಮಗಳನ್ನು ಕಲಾ ವೇದಿಕೆಗಳು ಮಾಡಬೇಕು. ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಉಳಿದುಕೊಂಡಿರುವ ಜಾನಪದ ಹಾಡು. ಹಂತಿ. ಹಾಡು. ಡೊಳ್ಳಿನ ಪದಗಳು. ಬಯಲಾಟ ಮೊದಲಾದವುಗಳನ್ನು ಯಾರೂ ಕೇಳುವವರಿಲ್ಲದೇ ಕ್ರಮೇಣ ಕಣ್ಮರೆಯಾಗುತ್ತ ಹೊರಟಿವೆ. ಯಾರೂ ಬರೆಯದ. ಜನರ ಬಾಯಿಯಿಂದಲೇ ಈವರೆಗೆ ಜೀವಂತವಾಗಿರುವ ಈ ಕಲೆಗಳು ಮೊಬೈಲ್. ಫೇಸ್ ಬುಕ್ ಸಂಸ್ಕೃತಿಯಿಂದ ಅಳಿವಿನಂಚಿವೆ. ಅವುಗಳನ್ನು ಉಳಿಸುವ. ಶಾಶ್ವತವಾಗಿ ದಾಖಲಿಸುವ ಕೆಲಸಗಳನ್ನು ಕ್ಲಬ್ಬುಗಳು ಮಾಡಬೇಕು. ಅನೇಕ ವೈಚಾರಿಕ ವಿಷಯಗಳನ್ನು ಬಸವಣ್ಣನ ನೇತೃತ್ವದಲ್ಲಿ ಅನುಭವ ಮಂಟಪದಲ್ಲಿ ಆಚರಿಸಲಾಯಿತು. ಸಮಾನತೆ. ಜಾತ್ಯಾತೀತತೆ. ಕಾಯಕ ಪ್ರಜ್ಞೆ. ದಾಸೋಹ ಎಂಬ ಕಲ್ಪನೆಗಳನ್ನು ಶರಣರು ಹುಟ್ಟು ಹಾಕಿದ್ದು ಮರೆಯದೇ ಅವುಗಳನ್ನು ಮುಂದುವರೆಸುವ ಕೆಲಸ ಮಾಡಬೇಕು ಎಂದವರು ಹೇಳಿದರು.

ಅತಿಥಿಯಾಗಿದ್ದ ಸರಿಗಮಪ ಖ್ಯಾತಿಯ ಗಾಯಕ ಎಸು ಬಸಪ್ಪ ಮಾತನಾಡಿ. ಕನ್ನಡದ ನೆಲದಲ್ಲಿರುವ ಅನೇಕ ಕಲೆಗಳಿಗೆ ಪೋಷಣೆ ನೀಡಬೇಕಾದ ಅವಶ್ಯಕತೆ ಇದೆ. ಸಂಘ. ಸಂಸ್ಥೆಗಳು. ಯುವ ಸಂಘಟನೆಗಳು ಇದಕ್ಕೆ ಸಹಾಯ ಮಾಡಬೇಕು. ಗ್ರಾಮೀಣ ಪ್ರದೇಶದಲ್ಲಿಯೇ ಕಳೆದುಹೋಗಿದ್ದ ನನ್ನ ಗಾಯನ ಪ್ರತಿಭೆಯನ್ನು ಗುರುತಿಸಿ. ಅದಕ್ಕೆ ಎಲ್ಲ ರೀತಿಯ ಪ್ರೋತ್ಸಾಹ ನೀಡಿದ ಕಿರುತೆರೆಯ ವೇದಿಕೆಗಳಿಂದ ಬಹಳಷ್ಟು ಸಹಾಯವಾಗಿದೆ ಎಂದವರು ಹೇಳಿದರು. ವಿದ್ಯಾರ್ಥಿಯ ಆಗ್ರಹದ ಮೇರೆಗೆ ಕೆಲವು ಗೀತೆಗಳನ್ನು ಹಾಡಿ ಅವರು ಚಪ್ಪಾಳೆ ಗಿಟ್ಟಿಸಿಕೊಂಡರು.

ಪ್ರಾಚಾರ್ಯರಾದ ಎಸ್.ಎನ್.ಪೊಲೇಶಿ. ಕಲಾವೇದಿಕೆಯ ಸಂಚಾಲಕ ಡಾ.ಪ್ರಕಾಶ ನರಗುಂದ. ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಎಸ್.ಎಸ್.ಪಾಟೀಲ. ಶಿಕ್ಷಣ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ.ಎಸ್.ಎಸ್.ಹೂಗಾರ. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಪಿ.ಎಚ್. ಉಪ್ಪಲದಿನ್ನಿ. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಬಿ.ಎ.ಗೂಳಿ. ಅಧ್ಯಾಪಕರಾದ ಡಾ.ರಹೀಮ್ ಮುಲ್ಲಾ. ಪ್ರೊ.ವಿ.ಎಸ್.ಲಮಾಣಿ. ವಿದ್ಯಾರ್ಥಿ ವೇದಿಕೆ ಕಾರ್ಯದರ್ಶಿ ನವೀನ ಚಲವಾದಿ ಇದ್ದರು. ಡಾ.ಪ್ರಕಾಶ ನರಗುಂದ ಸ್ವಾಗತಿಸಿ. ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರೊ.ಶ್ರೀಶೈಲ ಹತ್ತಿ ನಿರೂಪಿಸಿದರು. ನವೀನ ಚಲವಾದಿ ವಂದಿಸಿದರು.




### ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಮಾತೋಶ್ರೀ ಗಂಗಮ್ಮನವರ ಜೀವನವೇ ಮಾದರಿ

ಪಂಚಾಯತ ವಾಹಿನಿ

ಮುದ್ದೇಬಿಹಾಳ : ಮಾತೋಶ್ರೀ ಗಂಗಮ್ಮ ವೀರಪ್ಪ ಚಿನಿವಾರ ಅವರು ತಮ್ಮ ಎಲ್ಲಾ ಆಸ್ತಿಗಳನ್ನು ಮಕ್ಕಳ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳ ಜ್ಞಾನಾರ್ಜನೆಗಾಗಿ ತ್ಯಾಗ ಮಾಡಿದ್ದಾರೆ ಎಂದು ಸಾಹಿತಿ ಡಾ. ಸಂಗಮೇಶ ಎಸ್ .ಮೇಟಳ್ಳಿ ಹೇಳಿದರು

ಅವರು ಮುದ್ದೇಬಿಹಾಳದ ಎಂಜಿವ್ಹಿಸಿ ಪದವಿ ಮಹಾವಿದ್ಯಾಲಯದ ಸಂಸ್ಥಾಪಕಿ ಆಧುನಿಕ ಅತ್ತಿಮಬ್ಬೆ ಮಾತೃಶ್ರೀ ಗಂಗಮ್ಮನವರ 30 ನೇ ಪುಣ್ಯಸ್ಮರಣೆಯ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿ ಮಾತನಾಡಿದರು ಗಂಗಮ್ಮನವರ ಜೀವನವೇ ಸಮಾಜಕ್ಕೆ ಹಾಗೂ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಬಹು ದೊಡ್ಡ ಕೊಡುಗೆಯಾಗಿದೆ.ಅವರ ಜೀವನವೇ ಸಮಾಜಕ್ಕೆ ಮಾದರಿಯಾದದು ಎಂದರು

ಕಾರ್ಯಕ್ರಮ ಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಇಳಕಲ್ ನ ಚಿತ್ತರಗಿ ಸಂಸ್ಥಾನ ಮಠದ ಗುರು ಮಹಾಂತ ಶ್ರೀಗಳು ಗಂಗಮ್ಮನವರ ದೂರದೃಷ್ಟಿಯ ಶಿಕ್ಷಣ ಸಂಸ್ಥೆಯಂತೆ ಎಲ್ಲಾ ಶಿಕ್ಷಣ ಸಂಸ್ಥೆಗಳು ಆಗಬೇಕು .ಸಂಸ್ಥೆಗಳಲ್ಲಿ ಶಿಕ್ಷಣ ಜ್ಞಾನದ ಹಣತೆಗಳು ಬೆಳಗಬೇಕು ಎಂದರು



ಎಸ್ ಜೀವಿಸಿ ಟ್ರಸ್ಟ್ ಅಧ್ಯಕ್ಷರಾದ ಸತೀಶ್ ಜಿಗಜಿನ್ನಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ವಿದ್ಯಾರ್ಥಿಗಳಿಗೆ ದುರ್ಲಭವಾಗಿದ್ದ ಶಿಕ್ಷಣ ಸಂಸ್ಥೆಯನ್ನು ಕಟ್ಟಿದ ಗಂಗಮ್ಮ ನವರು ಬೌದ್ಧಿಕ ಜ್ಞಾನ, ಆರ್ಥಿಕ ಗಳಿಕೆ ಮಾಡಿ ಉದ್ಧಾರ ಆಗಲು ಸಹಾಯ ಮಾಡಿದ್ದಾರೆ ಕನ್ನಂತೆ ಮನೋದೈಹಿಕ ಬೆಳವಣಿಗೆ ಅಲ್ಲದೆ ಸಮಾಜ ಬೆಳವಣಿಗೆಗೂ ವಿದ್ಯಾರ್ಥಿಗಳು ಕೊಡುಗೆ ನೀಡಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿಗಳು ಆದ ಅಶೋಕ ತಡಸದ. ಆಡಳಿತಾಧಿಕಾರಿ ಪ್ರೊ ಎ. ಬಿ. ಕುಲಕರ್ಣಿ. ನಿವೃತ್ತ ಪ್ರಾಂಶುಪಾಲರಾದ ಎಸ್ ಜಿ ನಂದಿ. ಎಂ ಎಸ್. ಗವಣ್ಣವರ. ಪದವಿ ಕಾಲೇಜು ಪ್ರಾಂಶುಪಾಲ ಎಸ್.ಎನ್ ಪೊಲೇಶಿ. ರಾಜು ದಡ್ಡಿ. ಸಹನಾ ಬಡಿಗೇರ. ಡಾ. ಬಿ.ಎ ಗೂಳಿ. ಎಸ್. ವಿ. ಗುರುಮಠ. ಎಸ್ ಎಸ್ ಪಾಟೀಲ್. ಎಸ್. ಎಸ್. ಹೂಗಾರ. ಎಚ್ ಜಿ. ಪಾಟೀಲ್ ಸೇರಿದಂತೆ ಇನ್ನಿತರ ಸಂಸ್ಥೆಯ ಉಪನ್ಯಾಸಕ ರು. ಸಿಬ್ಬಂದಿ ವರ್ಗದವರು ಇದ್ದರ. ಡಾ. ಪ್ರಕಾಶ್ ನರಗುಂದ ಕಾರ್ಯಕ್ರಮ ನಿರೂಪಿಸಿದರು. ವಿ.ಎಸ್ ಲಮಾಣಿ ವಂದನಾರ್ಪಣೆ ಮಾಡಿದರು. ಇದೇ ಸಂದರ್ಭದಲ್ಲಿ ಪ್ರಕಾಶ್ ನರಗುಂದ ಅವರು ಬರೆದ ಕವನ ಸಂಕಲನವನ್ನು ಬಿಡುಗಡೆ ಮಾಡಲಾಯಿತು.

# ಮುತ್ತಿನ ತೆನೆ ಲೋಕಾರ್ಪಣೆ ಇಂದು

ಮುದ್ದೇಬಿಹಾಳ: ಪಟ್ಟಣದ ಎಂಜಿವಿಸಿ ಕಾಲೇಜಿನಲ್ಲಿ ಆ.19ರಂದು ಬೆಳಿಗ್ಗೆ 10.30ಕ್ಕೆ ಎಂಜಿವಿಸಿ ಪದವಿ ಮಹಾವಿದ್ಯಾಲಯದ ಕನ್ನಡ ಪ್ರಾಧ್ಯಾಪಕ, ಸಾಹಿತಿ ಡಾ. ಪ್ರಕಾಶ ನರಗುಂದ ಅವರ ಸಂಪಾದನಾ ಕೃತಿ ಮುತ್ತಿನ ತೆನೆ ಲೋಕಾರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಎಸ್‌ಜೆವ್ಹಿಸಿ ಟ್ರಸ್ಟಿನ ಕಾರ್ಯದರ್ಶಿ ಅಶೋಕ ತಡಸದ ಕೃತಿ ಲೋಕಾರ್ಪಣೆ ಮಾಡುವರು. ಕಾಲೇಜಿನ ಪ್ರಾಚಾರ್ಯ ಪ್ರೊ. ಎಸ್. ಎನ್. ಪೋಲೇಶಿ ಅಧ್ಯಕ್ಷತೆ ವಹಿಸುವರು. ಶಿಕ್ಷಕ ಬಿ. ಎಸ್. ಹಂಚಲಿ ಕೃತಿ ಅವಲೋಕಿಸುವರು. ಕಾಲೇಜಿನ ಆಡಳಿತಾಧಿಕಾರಿಗಳಾದ ಎ. ಬಿ. ಕುಲಕರ್ಣಿ, ಗ್ರಂಥ ಸಂಪಾದಕ ಡಾ. ಪ್ರಕಾಶ ನರಗುಂದ, ಪ್ರೊ. ಎಸ್. ಎಸ್. ಹೂಗಾರ, ಡಾ. ಎಸ್. ಬಿ. ಜಾಧವ ಸೇರಿ ಹಲವರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

ಸಂಯುಕ್ತ ಕರ್ನಾಟಕ Thu, 19 August epaper.samyukth

---

ಮುದ್ದೇಬಿಹಾಳ: ಉದಯವಾಣಿ ವಿಜಯಪುರ ಜಿಲ್ಲಾ ವರದಿಗಾರ ಜಿ.ಎಸ್. ಕಮತರ ಅವರಿಗೆ ದಿ। ಡಾ.ನಾಗರಾಜ ಜಮಖಂಡಿ ಸ್ಮರಣಾರ್ಥ 2019-20ನೇ ಸಾಲಿನ ಮಾಧ್ಯಮ ಸಾಧಕ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಮುದ್ದೇಬಿಹಾಳ: ಟಾಪ್ ಇನ್ ಟೌನ್ ಫಂಕ್ಷನ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಟಿವಿ 9 ನಿರೂಪಕಿ ... ಕರ್ನಾಟಕ ಜರ್ನಲಿಸ್ಟ್ ಯೂನಿಯನ್‌ನ 2019-20ನೇ ಸಾಲಿನ ಮಾಧ್ಯಮ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮುದ್ದೇಬಿಹಾಳ: ದೇಶದ ಸಂವಿಧಾನದ ಮೂರು ಅಂಗಗಳ ಜೊತೆಗೆ ನಾಲ್ಕನೇ ಅಂಗ ಎನ್ನಿಸಿಕೊಂಡಿರುವ ಮಾಧ್ಯಮವೂ ಕಲುಷಿತಗೊಂಡಿದೆ ಎನ್ನುವುದಕ್ಕೆ ವಿಷಾದಿಸುತ್ತೇನೆ ಎಂದು ಲೋಕಾಯುಕ್ತ ನಿವೃತ್ತ ನ್ಯಾ। ಸಂತೋಷ ಹೆಗ್ಡೆ ಹೇಳಿದರು.

ಇಲ್ಲಿನ ಹುಡ್ಕೋದಲ್ಲಿರುವ ಟಾಪ್ ಇನ್ ಟೌನ್ ಕನ್ವೆನ್ಷನ್ ಹಾಲ್‌ನಲ್ಲಿ ಶುಕ್ರವಾರ ಕೆಜೆಯುಆ ರಾಜ್ಯ, ಜಿಲ್ಲಾ, ತಾಲೂಕು ಘಟಕಗಳ ಆಶ್ರಯದಲ್ಲಿ ನಡೆದ ಪತ್ರಿಕಾ ದಿನಾಚರಣೆ, ಪ್ರಶಸ್ತಿ ಪ್ರದಾನ, ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸಕ್ತ ರಾಜಕೀಯ ಬೆಳವಣಿಗೆ ಶಾಸಕಾಂಗದಲ್ಲಿ ಏನು ನಡೆಯುತ್ತಿದೆ ಎನುವುದಕ್ಕೆ ಸಾಕ್ಷಿಯಾಗಿದೆ. ಸರಕಾರ ಹುದ್ದೆಗಳಿಗೆ ಲಂಚ ನೀಡಿ ಬಂದವನು ಬೇರೊಬ್ಬರಿಂದ ಲಂಚ ಪಡೆಯುವ ಪ್ರವೃತ್ತಿ ಬೆಳೆಸಿಕೊಳ್ಳುತ್ತಾನೆ. ಇಂತಹ ಸ್ಥಿತಿ ಮಾಧ್ಯಮದಲ್ಲಿಯೂ ಪೇಯ್ಡ್ ನ್ಯೂಸ್‌ಗಳ ಮೂಲಕ ನಡೆಯುತ್ತಿವೆ. ಬ್ಲ್ಯಾಕ್‌ಮೇಲ್ ಪದ್ಧತಿ ನಡೆಯುತ್ತಿದೆ. ಎಲ್ಲ ಕ್ಷೇತ್ರಗಳಲ್ಲಿಯೂ ಪ್ರಮಾಣಿಕವಾಗಿ ಮತ್ತು ಜವಾಬ್ದಾರಿಯುತವಾಗಿ ಕೆಲಸ ಮಾಡಿದರೆ ಮಾತ್ರ ಮುಂದೆ ಇವುಗಳ ಮೇಲೆ ವಿಶ್ವಾಸ ಉಳಿದುಕೊಳ್ಳುತ್ತದೆ ಎಂದು ಹೇಳಿದರು.

ಪೇಯ್ಡ್ ನ್ಯೂಸ್, ಬ್ಲ್ಯಾಕ್‌ಮೇಲ್ ಹಾವಳಿಯನ್ನು ಮಾಧ್ಯಮ ಬಹಳ ಗಂಭೀರವಾಗಿ ಪರಿಗಣಿಸಬೇಕು. ಜನರು ತನ್ನಲ್ಲಿ ಇಟ್ಟ ಅಭಿಮಾನ, ಗೌರವ, ನಂಬಿಕೆಗಳಿಗೆ ಇಂಥವುಗಳಿಂದ ಧಕ್ಕೆ ಬರದಂತೆ ದಿಟ್ಟ ನಿರ್ಣಯ ತೆಗೆದುಕೊಳ್ಳಬೇಕು. ಸತ್ಯವನ್ನು ಒಪ್ಪಬೇಕು ಮುಚ್ಚಿ ಹಾಕುವ ಪ್ರಯತ್ನ ಮಾಡಬಾರದು. ಮಾಧ್ಯಮದವರಿಗೆ ಜವಾಬ್ದಾರಿ ಇರಬೇಕು. ಪ್ರಶಸ್ತಿಗಳು ಅದನ್ನು ಪಡೆಯುವಂಥ ಉತ್ತಮ ವ್ಯಕ್ತಿಗಳ ಕಾರ್ಯಕ್ಕೆ ... ದೊರಕು ... ಪ್ರಶಸ್ತಿ ... ಎಂದರು.

... ಜನರ ಪ್ರೀತಿಗೆ ಪಾತ್ರರಾದವರನ್ನು ಗುರುತಿಸಿ ಸನ್ಮಾನಿಸಿದರೆ ಅದು ಸನ್ಮಾನಿಸಿದ ಸಂಸ್ಥೆಯ

## ಭ್ರಷ್ಟಾಚಾರ ನಿರ್ಮೂಲನೆ ಅಸಾಧ್ಯವಲ್ಲ



**ವಿದ್ಯಾರ್ಥಿಗಳ ಜತೆ ಸಂವಾದ**

ಮುದ್ದೇಬಿಹಾಳ: ಸರ್ ರಾಜಕೀಯ ವ್ಯವಸ್ಥೆ ಸಾಕಷ್ಟು ಹದಗೆಟ್ಟಿದೆ. ಇದಕ್ಕೇನು ಪರಿಹಾರ? ರಾಜಕಾರಣಿಗಳು ಮೂರು ಬಿಟ್ಟು ನಿಂತಿದ್ದು ಇಂಥವರ ಮೇಲೆ ಕ್ರಮ ಜರುಗಿಸುವುದು ಸಾಧ್ಯವಿಲ್ಲವೇ? ನಮ್ಮ ಸಂವಿಧಾನ ನಮಗೆ ಕೊಟ್ಟಿರುವ ಹಕ್ಕು, ಕರ್ತವ್ಯಗಳು ಸರಿಯಾಗಿ ಪಾಲನೆ ಆಗುತ್ತಿಲ್ಲ, ಇದಕ್ಕಾಗಿ ಯಾರನ್ನು ಕೇಳಬೇಕು? ಸಂವಿಧಾನ ನೀಡಿದ ಮೀಸಲಾತಿ ವ್ಯವಸ್ಥೆ ಇನ್ನೂ ಮುಂದುವರಿದಿರುವುದು ಎಷ್ಟು ಸರಿ? ಭ್ರಷ್ಟಾಚಾರ ನಿರ್ಮೂಲನೆ ಸಾಧ್ಯವಿಲ್ಲವೇ? ಅಕ್ರಮ ಗಣಿಗಾರಿಕೆ ನಡೆಸುವ ದೊಡ್ಡ ಕುಳಗಳನ್ನು ಮಟ್ಟ ಹಾಕಲು ಸರ್ಕಾರದಿಂದ ಸಾಧ್ಯವಿಲ್ಲವೇ?

ಇಂಥ ಹಲವು ಪ್ರಶ್ನೆಗಳು ತೂರಿಬಂದದ್ದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಅವರಿಗೆ. ವಿಜಯಪುರ ಜಿಲ್ಲೆ ಮುದ್ದೇಬಿಹಾಳ ಪಟ್ಟಣದ ಟಾಪ್ ಇನ್ ಟೌನ್ ಕನ್ವೆನ್ಷನ್ ಹಾಲ್‌ನಲ್ಲಿ ಶುಕ್ರವಾರ ಏರ್ಪಡಿಸಿದ್ದ ಪತ್ರಿಕಾ ದಿನಾಚರಣೆ, ಪ್ರಶಸ್ತಿ ವಿತರಣೆ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಪ್ರಾರಂಭಕ್ಕೂ ಮುನ್ನ.

ಅಂದಾಜು ಒಂದು ಗಂಟೆಗೂ ಹೆಚ್ಚು ಕಾಲ ನಡೆದ ಸಂವಾದ ಕಾರ್ಯಕ್ರಮದಲ್ಲಿ ಪಟ್ಟಣದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ತಮ್ಮ ಸಂಶಯಗಳನ್ನು ಸಂತೋಷ ಹೆಗ್ಡೆ ಅವರಿಗೆ ಕೇಳಿ ನಿವಾರಿಸಿಕೊಂಡ ಬಗೆ ಹೀಗಿತ್ತು.

ಅಂದಾಜು 25-30 ಪ್ರಶ್ನೆಗಳಲ್ಲಿ ಅತಿ ಹೆಚ್ಚು ಪ್ರಶ್ನೆಗಳು ಭ್ರಷ್ಟಾಚಾರ ವಿರುದ್ಧವೇ ಗುರಿ ಹೊಡೆದರೆ ಎಲ್ಲೋ ಒಂದಷ್ಟು ಸಂವಿಧಾನ, ಮೀಸಲಾತಿ, ಡಾ। ಅಂಬೇಡ್ಕರ್ ಅವರ ಉದ್ದೇಶ ಮುಂತಾದವುಗಳ ಬಗ್ಗೆ ಇದ್ದವು. ಎಲ್ಲ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ನೀಡಿದ ಸಂತೋಷ ಹೆಗ್ಡೆ ಅವರು, ಭ್ರಷ್ಟಾಚಾರ ನಿರ್ಮೂಲನೆ ಮಾಡಲು ನಮ್ಮಿಂದ ಸಾಧ್ಯವಿದೆ. ಇದಕ್ಕೆ ಮೊದಲು ನಾವು, ನೀವೆಲ್ಲ ಭ್ರಷ್ಟಾಚಾರ ತಡೆಗಟ್ಟುವ ಗಟ್ಟಿ ನಿರ್ಧಾರ ಮಾಡಬೇಕು. ಕೊಡುವವರು ಇರುವತನಕ ತೆಗೆದುಕೊಳ್ಳುವವರೂ ಇರುತ್ತಾರೆ ಅನ್ನೋದನ್ನು ತಿಳಿದುಕೊಳ್ಳಬೇಕು. ವಿದ್ಯಾರ್ಥಿ, ಯುವ ಸಮೂಹ ಸಮಾಜದಲ್ಲಿ ಬದಲಾವಣೆ ತರುವ ಶಕ್ತಿ ಹೊಂದಿದ್ದು ಇವರೆಲ್ಲ ಜಾಗೃತರಾಗಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿನಿಯೊಬ್ಬಳು ಜಾತಿ ಭೇದ ಎಣಿಸುವಂತಿಲ್ಲ ಎಂದು ನಮ್ಮ ಸಂವಿಧಾನ ಹೇಳುತ್ತದೆ. ಆದರೆ ಸರ್ಕಾರಗಳು ಉದ್ಯೋಗ ಕೊಡುವಾಗ ಜಾತಿ ಕೇಳಿ, ಜಾತಿ ಆಧಾರದ ಮೇಲೆ ಉದ್ಯೋಗ ಕೊಡುತ್ತವೆ. ಇದಕ್ಕೆ ಕಡಿವಾಣ ಸಾಧ್ಯವಿಲ್ಲವೇ ಎಂದು ಪ್ರಶ್ನಿಸಿದಾಗ ಉತ್ತರಿಸಿದ ಹೆಗ್ಡೆ ಇದಕ್ಕೆ ಸಮಂಜಸ ಉತ್ತರ ಕೊಡಬಹುದು. ಆದರೆ ನಮ್ಮ ಕಾನೂನಿನಲ್ಲೇ ಆ ವ್ಯವಸ್ಥೆ ಇದೆ. ಡಾ। ಅಂಬೇಡ್ಕರ್ ಅವರು ಆಗಿನ ಕಾಲಮಾನಕ್ಕೆ ಅನುಗುಣವಾಗಿ ಮೀಸಲಾತಿ ಕೆಲವೇ ಅವಧಿಗೆ ಸೀಮಿತಗೊಳಿಸಿ ಜಾರಿಗೊಳಿಸಿದ್ದರು. ಆದರೆ ರಾಜಕಾರಣಿಗಳು ಅದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಸಂವಿಧಾನ ಬರೆಯುವವರು, ತಿದ್ದುವವರು ಅವರೇ ಆಗಿದ್ದು ಇದಕ್ಕೆ ಸಂವಿಧಾನದಲ್ಲೇ ಸೂಕ್ತ ಪರಿಹಾರ ಕಲ್ಪಿಸಬೇಕು ಎಂದು ಹೇಳಿದರು.

ಸರ್ಕಾರಿ ಪದವಿ ಪೂರ್ವ, ಎಂಜಿವಿಸಿ, ಸರ್ಕಾರಿ ಪ್ರೌಢಶಾಲೆ, ಆದರ್ಶ ವಿದ್ಯಾಲಯ, ಎಂಜಿವಿಸಿ ಬಿಇಡಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸೇರಿ ವಿವಿಧ ಕಾಲೇಜುಗಳ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಸರ್ಕಾರಿ ಪದವಿ ಕಾಲೇಜು ಪ್ರಾಂಶುಪಾಲ ಡಾ। ಎನ್.ಬಿ. ಹೊಸಮನಿ, ಎಂಜಿವಿಸಿ ಕಾಲೇಜಿನ ಹಿರಿಯ ಉಪನ್ಯಾಸಕ ಪ್ರೊ। ಎಸ್.ಎಸ್. ಹೂಗಾರ, ಬಿ.ನಾರಾಯಣ ವೇದಿಕೆಯಲ್ಲಿದ್ದರು. ಶ್ರೀಶೈಲ ಹೂಗಾರ, ಸಿದ್ದು ಹೆಬ್ಬಾಳ, ಜಿ.ಎಸ್. ಹೂಗಾರ ನಿರೂಪಿಸಿದರು.

**ಸಾಧಕರಿಗೆ ಪ್ರಶಸ್ತಿ ಪ್ರದಾನ**

ವಿಜಯಪುರ ಜಿಲ್ಲಾ ಉದಯವಾಣಿ ವರದಿಗಾರ ಜಿ.ಎಸ್. ಕಮತರ ಅವರಿಗೆ ದಿ। ಡಾ.ನಾಗರಾಜ ಜಮಖಂಡಿ ಸ್ಮರಣಾರ್ಥ ಸಾಧಕ ರತ್ನ ಪ್ರಶಸ್ತಿ ಹಾಗೂ ಬೆಂಗಳೂರಿನ ಟಿವಿ 9 ನಿರೂಪಕಿ ಸುಕನ್ಯಾ ಅವರಿಗೆ ಮಾಧ್ಯಮ ರತ್ನ ಪ್ರಶಸ್ತಿಯನ್ನು ಕರ್ನಾಟಕ ಜರ್ನಲಿಸ್ಟ್ ಯೂನಿಯನ್ ವತಿಯಿಂದ ನೀಡಲಾಯಿತು. ಇದೇ ವೇಳೆ ಜಿಲ್ಲೆ ಪತ್ರಕರ್ತರಾದ ಪಿ.ವಿ. ಮಮದಾಪುರ, ಗುರುರಾಜ ಹೂಗಾರ, ಶುಭಾ ಹತ್ತಳ್ಳಿ ಸೇರಿ 11 ಪತ್ರಕರ್ತರನ್ನು ಸನ್ಮಾನಿಸಲಾಯಿತು.

ಗೌರವ ಎತ್ತರ ಮಟ್ಟಕ್ಕೆ ತಗೊಂಡು ಹೋಗ... ಎಂದು ಕಿವಿಮಾತು ಹೇಳಿದರು. ವಿಧಾನ ಪರಿ... ಸದಸ್ಯ ಹನುಮಂತ ನಿರಾಣಿ, ಅರವಿಂದ ಜಮಖಂ... ಪ್ರಶಸ್ತಿ ಪುರಸ್ಕೃತರಾದ ಜಿ.ಎಸ್. ಕಮತರ, ಸು... ಮಾತನಾಡಿದರು. ಜಿಪಂ ಉಪಾಧ್ಯಕ್ಷ ಪ್ರಭು... ದೇಸಾಯಿ, ಮಂಗಳಾದೇವಿ ಬಿರಾದಾರ, ... ನಾವದಗಿ, ಮಲ್ಲಿಕಾರ್ಜುನ ಮದರಿ, ಡಾ। ಬಸ... ಅಸ್ಕಿ, ಮಲ್ಲನಗೌಡ ಬಿರಾದಾರ, ಎಸ್.ಬಿ. ಚಲ... ಪುರಸಭೆ ಸದಸ್ಯ ಸಂಗಮ್ಮ ದೇವರಳ್ಳಿ, ವಕೀಲರ ... ಅಧ್ಯಕ್ಷ ಎಂ.ಎಚ್. ಕ್ವಾರಿ, ಪವನ್ ಕುಲಕರ್ಣಿ ... ಪಾಟೀಲ, ಬಿಇಒ ಎಸ್.ಡಿ. ಗಾಂಜಿ, ಮಲಕೇಂ... ಪಾಟೀಲ, ಜಿ.ಟಿ. ಘೋರ್ಪಡೆ, ಗಿ... ಪಾಟೀಲ, ಬಿ.ನಾರಾಯಣ, ಅಬ್ದುಲ್... ಇನ್ನಿತರರು ವೇದಿಕೆಯಲ್ಲಿದ್ದರು. ಸಂಗಮೇಶ ... ಪ್ರಾರ್ಥಿಸಿದರು. ಪುಂಡಲೀಕ ಮುರಾಳ ಸ್ವಾಗ... ನಾರಾಯಣ ಮಾಯಾಚಾರಿ ... ಮಾತನಾಡಿದರು. ಜಿ.ಎಸ್. ಹೂಗಾರ ಮತ್ತು ... ಹೂಗಾರ ನಿರೂಪಿಸಿದರು. ಮಂಜುನಾ... ಕುಂದರಗಿ ವಂದಿಸಿದರು.

# M.G.V.C ARTS, COMMERCE AND SCIENCE COLLEGE, MUDDEBIHAL

## PRESS CLUB (PAPER CUTTINGS)



ಮನಗೂಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ಸಾಂಸ್ಕೃತಿಕ, ಕ್ರೀಡಾ, ಎನ್‌ಎಸ್‌ಎಸ್ ಮತ್ತು ರೆಡ್ ಕ್ರಾಸ್ ಚಟುವಟಿಕೆಗಳ ಉದ್ಘಾಟನಾ ಸಮಾರಂಭವ ಜರುಗಿತು

## ‘ಜ್ಞಾನವೃದ್ಧಿಗೆ ಸತತ ಓದು ಅವಶ್ಯಕ’

ಪ್ರಜಾವಾಣಿ ವಾರ್ತೆ

ಮನಗೂಳಿ: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ 2020-21ನೇ ಸಾಲಿನ ಸಾಂಸ್ಕೃತಿಕ, ಕ್ರೀಡಾ, ಎನ್.ಎಸ್.ಎಸ್ ಮತ್ತು ರೆಡ್ ಕ್ರಾಸ್ ಚಟುವಟಿಕೆಗಳ ಉದ್ಘಾಟನಾ ಸಮಾರಂಭ ಜರುಗಿತು.

ಉಪನ್ಯಾಸಕ ಡಾ.ಪ್ರಕಾಶ ನರಗುಂದ, ‘ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ಪಠ್ಯದ ಜತೆ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ಜ್ಞಾನವೃದ್ಧಿಯಾಗಬೇಕಾದರೆ, ಸತತ ಓದು ಅವಶ್ಯಕ’ ಎಂದು ತಿಳಿಸಿದರು.

ರವಿ ಗೋಲಾ, ‘ಕ್ರೀಡಾ ಚಟುವಟಿಕೆಗಳಿಂದ ಬದುಕು

ಹೇಳಿದರು.

ವಿಶ್ವವಿದ್ಯಾಲಯ ಮಟ್ಟದ ಕ್ರೀಡಾ ಚಟುವಟಿಕೆಗಳಲ್ಲಿ ಸಾಧನೆ ತೋರಿದ ವಿದ್ಯಾರ್ಥಿಗಳಿಗೆ ಹಾಗೂ ಶೈಕ್ಷಣಿಕ ವರ್ಷದಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಪ್ರಾಚಾರ್ಯ ಡಾ.ಎಚ್.ಎ. ಕಟಗೂರ ಅಧ್ಯಕ್ಷತೆ ವಹಿಸಿದ್ದರು. ಚಂದ್ರಶೇಖರಗೌಡ ಪಾಟೀಲ, ಸಿದ್ದನಗೌಡ ಬಿರಾದಾರ, ಬಲವಂತ ಕುಲಕರ್ಣಿ, ವಿರುಪಾಕ್ಷಪ್ಪ ಪಟ್ಟಣಶೆಟ್ಟಿ, ಶಿವಾನಂದ ಗುಜಗೊಂಡ, ಮಹಾದೇವ ಬುರ್ಲಿ, ಪ್ರೊ.ಅನಿಲ ಚವ್ಹಾಣ, ಪ್ರೊ. ಎಲ್.ಎಚ್. ಮಮದಾಪುರ, ಪ್ರೊ. ಎಸ್.ಬಿ. ರಜಪೂತ, ಪ್ರೊ. ಹಮೀದ್ ಖಾನ್, ಪ್ರೊ.ಎಸ್.ಎಂ.ಪಾಟೀಲ, ಲಕ್ಷ್ಮಿ ಭಜಂತ್ರಿ, ಸುನಿತಾ ಚಾಂದಕೋಟೆ

## ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಮಾತೋಶ್ರೀ ಗಂಗಮ್ಮನವರ ಜೀವನವೇ ಮಾದರಿ

ಪಂಚಾಯತ ವಾಹಿನಿ

ಮುದ್ದೇಬಿಹಾಳ : ಮಾತೋಶ್ರೀ ಗಂಗಮ್ಮ ವೀರಪ್ಪ ಚಿನಿವಾರ ಅವರು ತಮ್ಮ ಎಲ್ಲಾ ಆಸ್ತಿಗಳನ್ನು ಮಕ್ಕಳ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳ ಜ್ಞಾನಾರ್ಜನೆಗಾಗಿ ತ್ಯಾಗ ಮಾಡಿದ್ದಾರೆ ಎಂದು ಸಾಹಿತಿ ಡಾ. ಸಂಗಮೇಶ ಎಸ್ .ಮೋಟಳ್ಳಿ ಹೇಳಿದರು

ಅವರು ಮುದ್ದೇಬಿಹಾಳದ ಎಂಜಿವ್ಹಿಸಿ ಪದವಿ ಮಹಾವಿದ್ಯಾಲಯದ ಸಂಸ್ಥಾಪಕಿ ಆಧುನಿಕ ಅತ್ತಿಮಬ್ಬೆ ಮಾತೃಶ್ರೀ ಗಂಗಮ್ಮನವರ 30 ನೇ ಪುಣ್ಯಸ್ಮರಣೆಯ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿ ಮಾತನಾಡಿದರು ಗಂಗಮ್ಮನವರ ಜೀವನವೇ ಸಮಾಜಕ್ಕೆ ಹಾಗೂ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಬಹು ದೊಡ್ಡ ಕೊಡುಗೆಯಾಗಿದೆ.ಅವರ ಜೀವನವೇ ಸಮಾಜಕ್ಕೆ ಮಾದರಿಯಾದದು ಎಂದರು

ಕಾರ್ಯಕ್ರಮ ಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಇಳಕಲ್ ನ ಚಿತ್ತರಗಿ ಸಂಸ್ಥಾನ ಮಠದ ಗುರು ಮಹಾಂತ ಶ್ರೀಗಳು ಗಂಗಮ್ಮನವರ ದೂರದೃಷ್ಟಿಯ ಶಿಕ್ಷಣ ಸಂಸ್ಥೆಯಂತೆ ಎಲ್ಲಾ ಶಿಕ್ಷಣ ಸಂಸ್ಥೆಗಳು ಆಗಬೇಕು .ಸಂಸ್ಥೆಗಳಲ್ಲಿ ಶಿಕ್ಷಣ ಜ್ಞಾನದ ಹಣತೆಗಳು ಬೆಳಗಬೇಕು ಎಂದರು



ಎಸ್ ಜೇವಿಸಿ ಟ್ರಸ್ಟ್ ಅಧ್ಯಕ್ಷರಾದ ಸತೀಶ್ ಜಿಗಜಿನ್ನಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ವಿದ್ಯಾರ್ಥಿಗಳಿಗೆ ದುರ್ಲಭವಾಗಿದ್ದ ಶಿಕ್ಷಣ ಸಂಸ್ಥೆಯನ್ನು ಕಟ್ಟಿದ ಗಂಗಮ್ಮ ನವರು ಬೌದ್ಧಿಕ ಜ್ಞಾನ, ಆರ್ಥಿಕ ಗಳಿಕೆ ಮಾಡಿ ಉದ್ಧಾರ ಆಗಲು ಸಹಾಯ ಮಾಡಿದ್ದಾರೆ ಕನ್ನಂತೆ ಮನೋದೈಹಿಕ ಬೆಳವಣಿಗೆ ಅಲ್ಲದೆ ಸಮಾಜ ಬೆಳವಣಿಗೆಗೂ ವಿದ್ಯಾರ್ಥಿಗಳು ಕೊಡುಗೆ ನೀಡಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿಗಳು ಆದ ಅಶೋಕ ತಡಸದ. ಆಡಳಿತಾಧಿಕಾರಿ ಪ್ರೊ ಎ. ಬಿ. ಕುಲಕರ್ಣಿ. ನಿವೃತ್ತ ಪ್ರಾಂಶುಪಾಲರಾದ ಎಸ್ ಜಿ ನಂದಿ. ಎಂ ಎಸ್. ಗವಣ್ಣವರ. ಪದವಿ ಕಾಲೇಜು ಪ್ರಾಂಶುಪಾಲ ಎಸ್.ಎನ್ ಪೋಲೇಶಿ. ರಾಜು ದಡ್ಡಿ. ಸಹನಾ ಬಡಿಗೇರ. ಡಾ. ಬಿ.ಎ ಗೂಳಿ. ಎಸ್. ವಿ. ಗುರುಮಠ. ಎಸ್ ಎಸ್ ಪಾಟೀಲ್. ಎಸ್. ಎಸ್. ಹೂಗಾರ. ಎಚ್ ಜಿ. ಪಾಟೀಲ್ ಸೇರಿದಂತೆ ಇನ್ನಿತರ ಸಂಸ್ಥೆಯ ಉಪನ್ಯಾಸಕ ರು, ಸಿಬ್ಬಂದಿ ವರ್ಗದವರು ಇದ್ದರ. ಡಾ. ಪ್ರಕಾಶ್ ನರಗುಂದ ಕಾರ್ಯಕ್ರಮ ನಿರೂಪಿಸಿದರು. ವಿ.ಎಸ್ ಲಮಾಣಿ ವಂದನಾರ್ಪಣೆ ಮಾಡಿದರು. ಇದೇ ಸಂದರ್ಭದಲ್ಲಿ ಪ್ರಕಾಶ್ ನರಗುಂದ ಅವರು ಬರೆದ ಕವನ ಸಂಕಲನವನ್ನು ಬಿಡುಗಡೆ ಮಾಡಲಾಯಿತು.

# M.G.V.C ARTS, COMMERCE AND SCIENCE COLLEGE, MUDDEBIHAL

## PRESS CLUB (PAPER CUTTINGS)

# ಪಠ್ಯೇತರ ಚಟುವಟಿಕೆಯಿಂದ ವ್ಯಕ್ತಿತ್ವ ವಿಕಸನ: ಡಾ. ನರಗುಂದ



ಉದಯಕಾಲ ಪತ್ರಿಕೆ

**ಉದಯಕಾಲ ನ್ಯೂಸ್**

**ಗುಳೇದಗುಡ್ಡ:** ವ್ಯಕ್ತಿತ್ವ ವಿಕಸನಕ್ಕೆ ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಗಳಿಗೆ ಅವಶ್ಯಕವಾಗಿದ್ದು, ಹೊಸ ಶಿಕ್ಷಣ ನೀತಿಯಲ್ಲಿ ಇದಕ್ಕೆ ಹೆಚ್ಚಿನ ಅವಕಾಶ ಕಲ್ಪಿಸಲಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು ಎಂದು ಮುದ್ದೇಬಿಹಾಳದ ಎಂ.ಜಿ.ವಿ.ಸಿ, ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ. ಪ್ರಕಾಶ ನರಗುಂದ ಹೇಳಿದರು.

ಅವರು ಶನಿವಾರ ಭಂಡಾರಿ ಹಾಗೂ ರಾಠಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಪಠ್ಯೇತರ ಚಟುವಟಿಕೆಗಳ ಸಮಾರೋಪ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದಲ್ಲಿ ಮಾತನಾಡಿ, ವಿದ್ಯಾರ್ಥಿಗಳು ಸಾಂಸ್ಕೃತಿಕ ಕ್ಷೇತ್ರದ ಸಂಭ್ರಮವನ್ನು ಆಚರಿಸಬೇಕು. ಸಾಂಸ್ಕೃತಿಕ ಕ್ಷೇತ್ರವು ಸಮಾಜದ ವ್ಯಕ್ತಿಗಳ ವ್ಯಕ್ತಿತ್ವವನ್ನು ಬದಲಿಸುವ ಶಕ್ತಿ ಹೊಂದಿದೆ. ನಾಟಕ, ಭಾಷಣ, ಕ್ರೀಡೆ ಮುಂತಾದ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳು ನಿರಂತರವಾಗಿ ಭಾಗವಹಿಸುವ ಮೂಲಕ ನಾಯಕತ್ವ . ಸಂಘಟನಾತ್ಮಕ ಗುಣಗಳನ್ನು ಬೆಳಸಿಕೊಳ್ಳಬೇಕು ಎಂದರು.

ಸಂಸ್ಥೆಯ ಕಾರ್ಯದರ್ಶಿ ರವೀಂದ್ರ, ಪಟ್ಟಣಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದರು. ಸಂಸ್ಥೆಯ ನಿರ್ದೇಶಕರುಗಳಾದ ಜುಗಲಕಿಶೋರ ಭಟ್ಟಡ, ಸಂಗಣ್ಣಾ ಪಟ್ಟಣಶೆಟ್ಟಿ ಮಾತನಾಡಿದರು. ಇದೇ ಸಂದರ್ಭದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಡಾ. ಪ್ರಕಾಶ ನರಗುಂದ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಅಮಾತೆಪ್ಪ ಕೊಪ್ಪಳ, ಪ್ರಾಚಾರ್ಯ ಎನ್.ವೈ. ಬಡನ್ನವರ, ಪಿಯು ಕಾಲೇಜಿನ ಪ್ರಾಚಾರ್ಯ ಸಿದ್ಧಲಿಂಗಪ್ಪ ಬರಗುಂಡಿ, ಡಾ. ಸಣ್ಣವೀರ ದೊಡಮನಿ, ಸಂಗಮೇಶ ಚಿಕ್ಕಾಡಿ, ಎಂ.ಎಂ. ಪಾಟೀಲ, ಡಾ. ಯಾದವರಾಜ ಸಂಗಮೇಶ ಭದ್ರಣ್ಣವರ, ಡಾ?ಬಿ.ಎಸ್. ಚವಡಿ, ಬಿ.ಯು. ಹಣಗಿ, ಡಾ. ಸುರೇಖಾ ಯಂಡಿಗೇರಿ ಮತ್ತಿತರರು ಇದರು.

# ಪುಸ್ತಕ ಓದುವ ಸಂಸ್ಕೃತಿ ಬೆಳೆಯಲಿ

**ತಾಳಿಕೋಟಿ ಟೈಮ್ಸ್ ನ್ಯೂಸ್**

**ಮುದ್ದೇಬಿಹಾಳ :** ಆಧುನಿಕ ತಂತ್ರಜ್ಞಾನದ ನವಮಾಧ್ಯಮಗಳ ಯುಗದಲ್ಲಿ ಪುಸ್ತಕ ಓದುವ ಪ್ರವೃತ್ತಿ ಕಡಿಮೆಯಾಗುತ್ತಿರುವುದು ಕಳವಳಕಾರಿ ಸಂಗತಿ ಎಂದು ಎಸ್.ಜಿ.ವ್ಹಿ.ಸಿ ಟ್ರಸ್ಟ್ ಕಾರ್ಯದರ್ಶಿ ಅಶಘಕ ತಡಸದ ಹೇಳಿದರು.

ಪಟ್ಟಣದ ಎಂ.ಜಿ.ವಿ.ಸಿ ಕಾಲೇಜಿನಲ್ಲಿ ಗುರುವಾರ ಸಾಹಿತಿ ಡಾ. ಪ್ರಕಾಶ ಎನ್.ನರಗುಂದ ಸಂಪಾದಿತ ಕೃತಿ "ಮುತ್ತಿನ ತೆನೆ" ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ಓದುವ ಸಂಸ್ಕೃತಿ ಹೆಚ್ಚಿಸುವುದಕ್ಕೆ ಆದ್ಯತೆ ನೀಡಬೇಕಿದೆ. ಜನ್ಮದಿನಾಚರಣೆ,ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಪುಸ್ತಕಗಳನ್ನು ಉಡುಗೊರೆ ರೂಪದಲ್ಲಿ ನೀಡು ವ ಪದ್ಧತಿ ಹೆಚ್ಚು ಆಚರಣೆಯಲ್ಲಿ ಬರಬೇಕಿದೆ ಎಂದರು. ನಿಡಗುಂದಿಯ ಚಿಂತಕ ಬಸವರಾಜ ಹಂಚಲಿ ಮಾತನಾಡಿ,ಡಾ.ಪ್ರಕಾಶ ನರಗು ಂದ ಅವರ ಸಂಶೋಧನಾ ಮನೋಭಾವ,ಸತ್ಯಶೋಧಕ ಗುಣದಿಂ ದ ಮೌಲ್ಯಯುತ ಕೃತಿಯನ್ನು ಹೊರ ತಂದಿದ್ದಾರೆ ಎಂದರು. ಆಡಳಿತಾ ಧಿಕಾರಿ ಎ.ಬಿ.ಕುಲ ಕರ್ಣಿ,ಪುಸ್ತಕದ ಲೇಖಕ ಡಾ.ಪ್ರಕಾಶ ಎನ್ ನರಗು ಂದ, ಅಧ್ಯಕ್ಷತೆ ವಹಿಸಿದ್ದ ಎಸ್. ಎನ್. ಪೊಲೇಶಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಬಿ.ಎಸ್.ಹಂಚಲಿ, ಡಾ.ಪ್ರಕಾಶ ನರಗುಂದ ಅವರನ್ನು ಸನ್ಮಾನಿಸಲಾಯಿತು.

ಪ್ರೊ. ಎಸ್.ಎಸ್.ಹೂಗಾರ ನಿರೂಪಿಸಿದರು. ವ್ಹಿ.ಎಸ್.ಲಮಾಣಿ ಸ್ವಾಗತಿಸಿದರು.ಡಾ.ಎಸ್.ಬಿ.ಜಾಧವ ವಂದಿಸಿದರು.



**ಮುದ್ದೇಬಿಹಾಳ ಪಟ್ಟಣದ ಎಂಜಿವಿಸಿ ಕಾಲೇಜಿನಲ್ಲಿ ಡಾ.ಪ್ರಕಾಶ ನರಗುಂದ ಸಂಪಾದಿತ ಮುತ್ತಿನ ತೆನೆ ಪುಸ್ತಕವನ್ನು ಲೋಕಾರ್ಪಣೆಗೊಳಿಸಲಾಯಿತು.ಎಸ್.ಜಿ.ವಿ.ಸಿ ಟ್ರಸ್ಟ್ ಅಧ್ಯಕ್ಷ ಅಶೋಕ ತಡಸದ,ಎ.ಬಿ.ಕುಲಕರ್ಣಿ,ಎಸ್.ಎಸ್.ಹೂಗಾರ,ಡಾ.ಪ್ರಕಾಶ ನರಗುಂದ,ಬಸವರಾಜ ಹಂಚಲಿ ಮೊದಲಾದವರು ಇದ್ದರು.**

# M.G.V.C ARTS, COMMERCE AND SCIENCE COLLEGE, MUDDEBIHAL

## PRESS CLUB (PAPER CUTTINGS)

اسٹیشن روڈ، وجے پور پہنچیں۔مزید تفصیلات کے لئے رابطہ کریں۔پون شرما۔ 8892278892۔ ہوگیا۔لاری ڈرائیور فرار ہو چکا ہے۔

# تمام اسکولوں میں اسکاؤٹس اینڈ گائیڈس یونٹس قائم کرنالازمی۔دمورمٹھ




مدے بہال 23جولائی(لاڈلے مشائخ)عارضی بی آرسی دمورمٹھ نے کہا کہ تعلقہ کے ہرایک سرکاری امدادی اور غیرامدادی لوئر پرائمری ،پائر پرائمری اور ہائی اسکولوں میں اسکاؤٹس اینڈ گائیڈس یونٹ کولازمی طورپر قائم کرنے کی ہدایات ہیں اس لئے اس سلسلہ میں تربیت یافتہ افراد جلد ہی اپنے اسکولوں میں یونٹ قائم کرکے سرگرمیوں کا آغاز کریں۔یہاں بی ای او دفتر کے ہال میں بھارت اسکاؤٹس اینڈ گائیڈس ،بی ای او اور بی آرسی دفتر کی جانب سے منعقدا سکاؤٹس اینڈ گائیڈس کی ابتدائی جانکاری اور تجدید تربیتی کیمپ کا پودے کی آبیاری کے ذریعہ افتتاح کرتے ہوئے دمورمٹھ نے اس خیال کا اظہار کیا۔انہوں نے کہاکہ فی الوقت تعلقہ میں چندہی یونٹس قائم ہیں،آنے والے دنوں میں اضافہ ہونا چاہئے جس کے لئے محکمہ تعلیمات عامہ نے دلچسپی لی ہے اور تعلقہ سطح کے اسکاؤٹس اینڈ گائیڈس یونٹس اپنی بہترین کارکردگی کا مظاہرہ کریں۔مہمان خصوصی فزیکل ہیلتھ افسرکڑی نے خطاب کرتے ہوئے کہاکہ محکمہ تعلیمات عامہ کا قانون ہے کہ ہرایک اسکول میں ایک اسکاؤٹس ماسٹرایک گائیڈس کپتان رہنا چاہئے اس لئے تمام اسکولوں کے میر معلمین اپنی اسکولوں میں ایک مرد اور ایک عورت اساتذہ کو تربیت کے لئے روانہ کریں۔صدارت کرتے ہوئے ادارہ کے چیرمین ایس ایس ہوگار نے کہاکہ ادارہ مقامی طورپر بے حد سرگرم ہے اور مقامی ادارہ کے انتخابات ہوں گے جس سے آئندہ سرگرمیوں کو فروغ دیا جائے گا۔اسکاؤٹس اینڈ گائیڈس کے مقامی نائب صدر وڈوڑکی، ادارہ کے ضلع کمشنر ناگیش شیوپور، کوآرڈینیٹر اے ایس باغوان، سکریٹری دتاتریہ کٹھارے نے بھی اسکاؤٹس اینڈ گائیڈس کی ضرورت واہمیت پر خطاب کیا۔اس موقع پر تعلیمی کوآرڈینیٹر میٹی، گوپال ہوگار، نداف مختلف اسکولوں کے میر معلمین ودیگر حاضر رہے۔

Pvt, Ltd., Plot. No. 33/1, & 15/1, (Easter Part), M.T. Sagar, Industrial Estate,
...aria Trade Centre, Koppikar Road, Hubballi-580020. Editor: Asjad Nawaz

# ಮಾಧ್ಯಮವೂ ಕಲುಷಿತಗೊಂಡಿದೆ

## ಪತ್ರಿಕಾ ದಿನಾಚರಣೆ, ಪ್ರಶಸ್ತಿ ಪ್ರದಾನ, ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ನ್ಯಾ. ಹೆಗಡೆ

• **ಕನ್ನಡಪ್ರಭ ವಾರ್ತೆ** ಮುದ್ದೇಬಿಹಾಳ

ಸಂವಿಧಾನದ 3 ಪ್ರಮುಖ ಅಂಗಗಳಾದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ ಜೊತೆ 4ನೇ ಅಂಗ ಎನಿಸಿಕೊಂಡಿರುವಮಾಧ್ಯಮವೂಕಲುಷಿತಗೊಂಡಿದ್ದು ವಿಷಾದಪಡುವಂಥದ್ದು ಎಂದು ಮಾಜಿ ಲೋಕಾಯುಕ್ತ ನ್ಯಾ.ಸಂತೋಷ ಹೆಗಡೆ ಅವರು ಹೇಳಿದ್ದಾರೆ.

ಇಲ್ಲಿನ ಹುಡ್ಕೋದಲ್ಲಿರುವ ಟಾಪ್ ಇನ್ ಟೌನ್ ಕನ್ವೆನ್ಷನ್ ಹಾಲ್‌ನಲ್ಲಿ ಶುಕ್ರವಾರ ಕೆಜೆಯೂ ರಾಜ್ಯ, ಜಿಲ್ಲಾ, ತಾಲೂಕು ಘಟಕಗಳ ಆಶ್ರಯದಲ್ಲಿ ನಡೆದ ಪತ್ರಿಕಾ ದಿನಾಚರಣೆ, ಪ್ರಶಸ್ತಿ ಪ್ರದಾನ, ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಶಾಸಕಾಂಗದಲ್ಲಿ ಏನು ನಡೆಯುತ್ತಿದೆ ಅನ್ನೋದನ್ನು ಪ್ರಸಕ್ತ ರಾಜಕೀಯ ಬೆಳವಣಿಗೆಗಳು ಮಾಧ್ಯಮಗಳು ತಿಳಿಸಿಕೊಡುತ್ತವೆ. ಲಂಚದ ಹಾವಳಿ ಹೆಚ್ಚಾಗಿ ಲಂಚ ಕೊಟ್ಟು ಬಂದವನು ಹುದ್ದೆಗೆ ಪ್ರಾಮಾಣಿಕನಾಗಿ ಇರುವುದರ ಬದಲು ಏನ್ ಬಿಟ್ಟಿ ಬಂದಿಲ್ರಿ, ಕೊಟ್ ಬಂದೀನ ಅನ್ನೋದು ಇವತ್ತಿನ ಕಾರ್ಯಾಂಗದ ಪರಿಸ್ಥಿತಿ. ನ್ಯಾಯಾಂಗದಲ್ಲಿ ವೈಯುಕ್ತಿಕ ವಿಚಾರ ನುಸುಳಿ ವಿಳಂಬ ಧೋರಣೆ ಹೆಚ್ಚಾಗುತ್ತಿದೆ. ಮಾಧ್ಯಮದಲ್ಲಿ ಪೇಡ್ ನ್ಯೂಜ್, ಹಣ ತಗೊಂಡು ಸುಳ್ಳು ವರದಿ ಮಾಡೋದು, ಬ್ಯಾಕ್‌ಮೇಲ್ ಪದ್ಧತಿ ವಿಜೃಂಭಿಸುತ್ತಿದೆ. ಇವೆಲ್ಲ ಪ್ರಾಮಾಣಿಕವಾಗಿ, ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕು. ಅಂದಾಗ ಮಾತ್ರ ಇವುಗಳ ಮೇಲಿನ ವಿಶ್ವಾಸ ಹೆಚ್ಚುತ್ತದೆ ಎಂದರು.

ಪೇಡ್ ನ್ಯೂಜ್, ಬ್ಯಾಕ್‌ಮೇಲ್ ಹಾವಳಿಯನ್ನು ಮಾಧ್ಯಮ ಬಹಳ ಗಂಭೀರವಾಗಿ ಪರಿಗಣಿಸಬೇಕು. ಜನರು ತನ್ನಲ್ಲಿ ಇಟ್ಟ ಅಭಿಮಾನ, ಗೌರವ, ನಂಬಿಕೆಗಳಿಗೆ ಇಂಥವುಗಳಿಂದ ಧಕ್ಕೆ ಬರದಂತೆ ದಿಟ್ಟ ನಿರ್ಣಯ ತೆಗೆದುಕೊಳ್ಳಬೇಕು. ಸತ್ಯವನ್ನು ಒಪ್ಪಲೇಬೇಕು ಮುಚ್ಚಿ ಹಾಕುವ ಪ್ರಯತ್ನ ಮಾಡಬಾರದು. ಪ್ರಶಸ್ತಿಗಳು ಅದನ್ನು ಪಡೆಯುವಂಥ ಉತ್ತಮ ವ್ಯಕ್ತಿಗಳ ಕಾರ್ಯಕ್ಕೆ ಮೀಸಲಾಗಿರಬೇಕೆ ಹೊರತು ಬೇರೆ ಕಾರಣಕ್ಕೆ ಪ್ರಶಸ್ತಿ ಕೊಡಬಾರದು. ಒಳ್ಳೆಯವರು, ಜನರ ಪ್ರೀತಿಗೆ ಪಾತ್ರರಾದವರನ್ನು ಗುರ್ತಿಸಿ ಸನ್ಮಾನಿಸಿದರೆ ಅದು ಸನ್ಮಾನಿಸಿದ ಸಂಸ್ಥೆಯ ಗೌರವ ಎತ್ತರಮಟ್ಟಕ್ಕೆ ತಗೊಂಡು ಹೋಗುತ್ತದೆ ಎಂದರು.

**ಪ್ರಶಸ್ತಿ ಪ್ರದಾನ, ಸನ್ಮಾನ:** ಎಂಎಲ್‌ಸಿ ಹಣಮಂತ ನಿರಾಣಿ, ಅರವಿಂದ ಜಮಖಂಡಿ, ಪ್ರಶಸ್ತಿ ಪುರಸ್ಕೃತರಾದ ಜಿ.ಎಸ್.ಕಮತರ, ಸುಕನ್ಯಾ ಮಾತನಾಡಿದರು. ಜಿಪಂ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ, ಗಣ್ಯರಾದ ಮಂಗಳಾದೇವಿ ಬಿರಾದಾರ, ಎಂ.ಬಿ.ನಾವದಗಿ, ಮಲ್ಲಿಕಾರ್ಜುನ ಮದರಿ, ಡಾ.ಬಸವರಾಜ ಅಸ್ಕಿ, ಮಲ್ಲನಗೌಡ ಬಿರಾದಾರ, ಎಸ್.ಬಿ.ಚಲವಾದಿ, ಪುರಸಭೆ ಸದಸ್ಯೆ ಸಂಗಮ್ಮ ದೇವರಳ್ಳಿ, ವಕೀಲರ ಸಂಘದ ಅಧ್ಯಕ್ಷ ಎಂ.ಎಚ್.ಕ್ವಾರಿ, ಪವನ್ ಕುಲಕರ್ಣಿ, ಡಿ.ಸಿ.ಪಾಟೀಲ, ಬಿಇಒ ಎಸ್.ಡಿ.ಗಾಂಜಿ, ಮಲಕೇಂದ್ರಗೌಡ ಪಾಟೀಲ, ಜಿ.ಟಿ.ಘೋರ್ಪಡೆ, ಗಿರೀಶಗೌಡ ಪಾಟೀಲ, ಬಿ.ನಾರಾಯಣ, ಅಬ್ದುಲ್‌ಹಕೀಮ್ ಇನ್ನಿತರರು ವೇದಿಕೆಯಲ್ಲಿದ್ದರು. ಹಿರಿಯ ಪತ್ರಕರ್ತ ಜಿ.ಎಸ್.ಕಮತರಗೆ ದಿ.ಡಾ.ನಾಗರಾಜ ಜಮಖಂಡಿ ಸ್ಮರಣಾರ್ಥ ಸಾಧಕ ರತ್ನ, ಬೆಂಗಳೂರಿನ ಟಿವಿ9 ನಿರೂಪಕಿ ಸುಕನ್ಯಾಗೆ ಮಾಧ್ಯಮ ರತ್ನ ಪ್ರಶಸ್ತಿ ನೀಡಿ ಪುರಸ್ಕರಿಸಲಾಯಿತು. ಜಿಲ್ಲೆಯ ಪತ್ರಕರ್ತರಾದ ಪಿ.ವಿ.ಮುಮದಾಪುರ, ಗುರುರಾಜ ಹೂಗಾರ, ಶುಭಾ ಹತ್ತಳ್ಳಿ ಸೇರಿ 11 ಪತ್ರಕರ್ತರನ್ನು ಸನ್ಮಾನಿಸಲಾಯಿತು.

ಸಂಗಮೇಶ ಶಿವಣಗಿ ಪ್ರಾರ್ಥಿಸಿದರು. ಪುಂಡಲೀಕ ಮುರಾಳ ಸ್ವಾಗತಿಸಿದರು. ನಾರಾಯಣ ಮಾಯಾಚಾರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿ.ಎನ್.ಹೂಗಾರ ಮತ್ತು ಶ್ರೀಶೈಲ ಹೂಗಾರ ನಿರೂಪಿಸಿದರು. ಮಂಜುನಾಥಸ್ವಾಮಿ ಕುಂದರಗಿ ವಂದಿಸಿದರು.

**ವಿದ್ಯಾರ್ಥಿಗಳೊಂದಿಗೆ ಸಂವಾದ:** ಕಾರ್ಯಕ್ರಮಕ್ಕೂ ಮುನ್ನ ನ್ಯಾ.ಸಂತೋಷ ಹೆಗಡೆ ಅವರು ಕಾಲೇಜು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಈ ವೇಳೆ ವಿದ್ಯಾರ್ಥಿಗಳ ಹಲವು ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿದರು. ಎಂಜಿವಿಸಿ ಕಾಲೇಜಿನ ಪ್ರೊ.ಎಸ್.ಎಸ್.ಹೂಗಾರ, ಸರ್ಕಾರಿ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಎನ್.ಬಿ.ಹೊಸಮನಿ ಮತ್ತಿತರರು ವೇದಿಕೆಯಲ್ಲಿದ್ದರು. ಶ್ರೀಶೈಲ ಹೂಗಾರ, ಸಿದ್ದು ಹೆಬ್ಬಾಳ ನಿರೂಪಿಸಿದರು.



ಪತ್ರಿಕಾ ದಿನಾಚರಣೆ, ಪ್ರಶಸ್ತಿ ಪ್ರದಾನ, ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ನ್ಯಾ.ಸಂತೋಷ ಹೆಗಡೆ ಉದ್ಘಾಟಿಸಿದರು. ಎಂಎಲ್‌ಸಿ ಹಣಮಂತ ನಿರಾಣಿ, ಗಣ್ಯರು ಇದ್ದಾರೆ.

- ಮುದ್ದೇಬಿಹಾಳ ಕೋರ್ಟ್‌ನ ನ್ಯಾಯಾಧೀಶರು, ವಕೀಲರು, ಬಿಇಒ ಕಚೇರಿ ಅಧಿಕಾರಿಗಳು, ಜಮಖಂಡಿ ಪರಿಹಾರ, ಕೆಜೆಯೂ ಸಂಘಟನೆ, ಜ್ಞಾನಭಾರತಿ ಶಾಲೆ ಹೀಗೆ ಹಲವರು ನ್ಯಾ.ಸಂತೋಷ ಹೆಗಡೆ ಅವರನ್ನು ಸನ್ಮಾನಿಸಿದರು.
- ಮುದ್ದೇಬಿಹಾಳ ಕೋರ್ಟ್‌ನ ಸಭಾಭವನದಲ್ಲಿ ನ್ಯಾ.ಸಂತೋಷ ಹೆಗಡೆ ಅವರನ್ನು ನ್ಯಾಯಾಧೀಶರು, ವಕೀಲರು ಸನ್ಮಾನಿಸಿದರು. ಈ ವೇಳೆ ಹೆಗಡೆ ಅವರಿಗೆ ಇಲ್ಲಿನ ನ್ಯಾಯಾಧೀಶರು 2 ನಿಂಬೆ ಹಣ್ಣು ಕೊಟ್ಟರು. ಇದು ಎಲ್ಲರನ್ನು ಚಕಿತಗೊಳಿಸಿತು. ನಂತರ ವಿಚಾರಿಸಿದಾಗ ದಕ್ಷಿಣ ಕರ್ನಾಟಕ, ಕರಾವಳಿ ಕರ್ನಾಟಕ ಭಾಗದಲ್ಲಿ ಗಣ್ಯರಿಗೆ ನಿಂಬೆ ಹಣ್ಣು ಕೊಟ್ಟು ಸ್ವಾಗತಿಸುವುದು ಸಂಪ್ರದಾಯ ಎನ್ನುವ ವಿಚಾರ ಗಮನಸೆಳೆಯಿತು.
- ಬಿಇಒ ಕಚೇರಿಗೆ ಭೇಟಿ ನೀಡಿ ಕಚೇರಿಯ ಪ್ರತಿಯೊಂದು ಕೊಠಡಿ, ಒಳಾಂಗಣ, ಹೊರಾಂಗಣ, ಉದ್ಯಾನವನ ಪರಿಶೀಲಿಸಿದ ನಿವೃತ್ತ ಲೋಕಾಯುಕ್ತ ನ್ಯಾ.ಸಂತೋಷ ಹೆಗಡೆ ಅವರು ಇಲ್ಲಿನ ವ್ಯವಸ್ಥೆ ಕಂಡು ಶ್ಲಾಘನೆ ವ್ಯಕ್ತಪಡಿಸಿದರು.

ಕನ್ನಡಪ್ರಭ Sat, 24 August 2019

# M.G.V.C ARTS, COMMERCE AND SCIENCE COLLEGE, MUDDEBIHAL

## PRESS CLUB (PAPER CUTTINGS)

### ಸೈಕಲ್ ಜಾಥಾಕ್ಕೆ ಸಿಪಿಐ ಚಾಲನೆ

ಮುದ್ದೇಬಿಹಾಳ: ತಾಲೂಕಿನ ನಾಲತವಾಡ ಹಾಗೂ ಮುದ್ದೇಬಿಹಾಳ ಹೋಬಳಿಗಳಲ್ಲಿ ಎರಡು ದಿನಗಳವರೆಗೆ ಹಮ್ಮಿಕೊಂಡಿರುವ ಸ್ಕೌಟ್ಸ್ ಚಳವಳಿಯ ಸೈಕಲ್ ಜಾಥಾಕ್ಕೆ ಸಿಪಿಐ ಸುದರ್ಶನ ಪಟ್ಟಣಕುಡೆ ಸೋಮವಾರ ಚಾಲನೆ ನೀಡಿದರು.

ಪಟ್ಟಣದ ಎಂಜಿವಿಸಿ ಕಾಲೇಜಿನ ಎದುರು ಸ್ಕೌಟ್ಸ್ ರೋವರ್‌ಗಳ ತಂಡದವರಿಗೆ ಹಸಿರು ನಿಶಾನೆ ತೋರುವ ಮೂಲಕ ಜಾಥಾಕ್ಕೆ ಚಾಲನೆ ನೀಡಲಾಯಿತು.

ದೈಹಿಕ ಶಿಕ್ಷಣಾಧಿಕಾರಿ ಎಸ್.ಬಿ.ಚಲವಾದಿ ಮಾತನಾಡಿ, ಪ್ರತಿಯೊಂದು ಶಾಲೆಗಳಲ್ಲಿ ಸ್ಕೌಟ್ಸ್ ಯುನಿಟ್ ಆರಂಭಿಸಲು ಸರ್ಕಾರದ ನಿರ್ದೇಶನ ನೀಡಿದ್ದು, ಅದರಂತೆ ಎಲ್ಲ ಶಾಲೆಗಳಲ್ಲಿ ಸ್ಕೌಟ್ಸ್ ವಿಭಾಗ ಆರಂಭಿಸಬೇಕು. ಇದಕ್ಕೆ ಸಂಬಂಧಿಸಿದ ಸ್ಕೌಟ್ಸ್ ಮಾಸ್ಟರ್ ಹಾಗೂ ಅಧಿಕಾರಿಗಳನ್ನು ಸಂಪರ್ಕಿಸಬೇಕು ಎಂದರು.

ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಪ್ರೊ.ಎಸ್.ಎಸ್.ಹೂಗಾರ ಮಾತನಾಡಿದರು. ಎಂಜಿವಿಸಿ ಕಾಲೇಜಿನ ಪ್ರಾಚಾರ್ಯ ಪ್ರೊ.ಎಸ್.ಜಿ.ನಂದಿ ಅಧ್ಯಕ್ಷತೆ ವಹಿಸಿದ್ದರು. ಸ್ಕೌಟ್ಸ್ ಕಾರ್ಯದರ್ಶಿ ಎ.ಕೆ.ಮುಲ್ಲಾ, ಪಿಜಾಂಟಿ ಎಸ್ ಬಿ ಬಂಗಾರಿ, ಸ್ಕೌಟ್ಸ್ ಮಾಸ್ಟರ್ ಜಿ.ಎಸ್.ಹೂಗಾರ ಮತ್ತಿತರರು ಇದ್ದರು.



ಮುದ್ದೇಬಿಹಾಳ ಎಂಜಿವಿಸಿ ಕಾಲೇಜಿನ ಬಳಿ ಸ್ಕೌಟ್ಸ್ ಜಾಗೃತಿ ಜಾಥಾಕ್ಕೆ ಸಿಪಿಐ ಸುದರ್ಶನ ಪಟ್ಟಣಕುಡೆ ಸೋಮವಾರ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಅತಿಕ್ರಮ...

### ಅಂಗವಿಕಲರ ಸಮೀಕ್ಷಾ ಕಾರ್ಯಕ್ಕೆ ಚಾಲನೆ

ಮುದ್ದೇಬಿಹಾಳ: ಅಂಗವಿಕಲರ ಅವಶ್ಯಕ ಸೌಲಭ್ಯ ಕೈಗೊಳ್ಳಲು ಸಹಕಾರಿಯಾಗುವ ಉದ್ದೇಶದಿಂದ ಪಟ್ಟಣ ವ್ಯಾಪ್ತಿಯಲ್ಲಿ ಅಂಗವಿಕಲರ ಸಮೀಕ್ಷಾ ಕಾರ್ಯ ಕೈಗೊಳ್ಳಲಾಗುತ್ತಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಎಂ.ಆರ್. ದಾಯಿ ಹೇಳಿದರು.

ಪಟ್ಟಣದ ಎಂಜಿವಿಸಿ ಕಾಲೇಜಿನಲ್ಲಿ ಗುರುವಾರ ಪುರಸಭೆ, ರೀಚ್ ಸಂಸ್ಥೆ, ಎಂಜಿವಿಸಿ ಕಾಲೇಜು ಸ್ಕೌಟ್ಸ್ ಮತ್ತು ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಅಂಗವಿಕಲರ ಸಮೀಕ್ಷಾ ಕಾರ್ಯಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಈ ಸಮೀಕ್ಷೆಯಿಂದ ನಗರ ಪ್ರದೇಶದಲ್ಲಿರುವ ಅಂಗವಿಕಲರ ಅಂಕಿ ಸಂಖ್ಯೆ ದೊರೆಯುತ್ತಿದ್ದು, ಇದರಿಂದ ಅವರಿಗೆ ಗುರುತಿನ ಚೀಟಿ ವಿತರಣೆ, ಮಾಸಾಶನ ವಿತರಣೆ, ಆರೋಗ್ಯ ಮುಂತಾದ ಸರ್ಕಾರಿ ಸೌಲಭ್ಯ ಒದಗಿಸಲು ಸಹಕಾರಿಯಾಗುತ್ತದೆ ಎಂದರು.

ಎಂಜಿವಿಸಿ ಕಾಲೇಜು ಪ್ರಾಚಾರ್ಯ ಎಸ್.ಜಿ. ನಂದಿ ಮಾತನಾಡಿ, ಸಾಮಾಜಿಕ ಕಾರ್ಯಕ್ಕೆ ಮೈಸೂರಿನ ಮಹಾರಾಣಿ ಕಾಲೇಜು ತೊಡಗಿಸಿಕೊಳ್ಳಲಾಗಿತ್ತು. ನಂತರ ಮುದ್ದೇಬಿಹಾಳ ಪುರಸಭೆ, ಎಂಜಿವಿಸಿ ಕಾಲೇಜಿನ ಎನ್‌ಎಸ್‌ಎಸ್, ಸ್ಕೌಟ್ಸ್ ಮತ್ತು ಗೈಡ್ಸ್, ರೀಚ್ ಸಂಸ್ಥೆ ವಿದ್ಯಾರ್ಥಿಗಳು ಈ ಕಾರ್ಯ ಮಾಡುತ್ತಿದ್ದಾರೆ ಎಂದರು.

ಸಮೀಕ್ಷೆಗೆ ತೆರಳುವ ವಿದ್ಯಾರ್ಥಿಗಳು ಪ್ರಾಮಾಣಿಕ ಹಾಗೂ ನೈಜತೆಗೆ ಒತ್ತು ನೀಡಿ ಅಂಗವಿಕಲರನ್ನು ಗುರುತಿಸಿ ಅವರ ವಿವರವನ್ನು ದಾಖಲಿಸಿ ಎಂದು ಸಲಹೆ ಮಾಡಿದರು. ಈ ಸಂದರ್ಭ ಒಟ್ಟು 23 ವಾರ್ಡ್‌ಗಳಲ್ಲಿ ರೀಚ್ ಸಂಸ್ಥೆ, ಎಂಜಿವಿಸಿ ಕಾಲೇಜಿನ ವಿದ್ಯಾರ್ಥಿಗಳು ಸಮೀಕ್ಷಾ ಕಾರ್ಯಕ್ಕೆ ನಿಯೋಜನೆ ಮಾಡಲಾಯಿತು.

ಪುರಸಭೆ ಅಧ್ಯಕ್ಷೆ ಫಾತೀಮಾ ಥವಳಗಿ, ಎನ್‌ಎಸ್‌ಎಸ್ ಅಧಿಕಾರಿ ಎಸ್.ಎಸ್.ಬಿದರಕುಂದಿ, ರೀಚ್ ಸಂಸ್ಥೆ ಕೆ.ಬೂದೆಪ್ಪ, ಗಂಗಾ ತೋಟದ, ಹರ್ಷಾ ಶೆಳಕೆ, ಪ್ರೊ.ಎಂ.ಬಿ.ಬಿರಾದಾರ ಮತ್ತಿತರರು ಇದ್ದರು. ಪ್ರೊ. ಎಸ್.ಎಸ್. ಹೂಗಾರ ನಿರೂಪಿಸಿದರು.



ಮುದ್ದೇಬಿಹಾಳದಲ್ಲಿ ಹಮ್ಮಿಕೊಂಡಿದ್ದ ವಿಕಲಚೇತನರ ಸಮೀಕ್ಷಾ ಕಾರ್ಯಕ್ಕೆ ಪುರಸಭೆ ಮುಖ್ಯಾಧಿಕಾರಿ ಎಂ.ಆರ್. ದಾಯಿ ಚಾಲನೆ ನೀಡಿ, ಮಾತನಾಡಿದರು.

ಪ್ರಜಾವಾಣಿ - 18-7-2014

---

### ಸ್ಕೌಟ್ಸ್ ಜಾಗೃತಿ ಜಾಥಾ

ಮುದ್ದೇಬಿಹಾಳ: ಪಟ್ಟಣದ ಎಂಜಿವಿಸಿ ಕಾಲೇಜಿನ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಂದ ತಮ್ಮ ಸಂಸ್ಥೆಯ ಉದ್ದೇಶ ಕುರಿತು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸೈಕಲ್ ಜಾಥಾವನ್ನು ಇಂದು ಬೆಳಗ್ಗೆ 8.30ಕ್ಕೆ ಹಮ್ಮಿಕೊಂಡಿದ್ದಾರೆ.

ಕಾರ್ಯಕ್ರಮವನ್ನು ಪ್ರಾಚಾರ್ಯ ಎಸ್.ಜಿ.ನಂದಿ ಉದ್ಘಾಟಿಸುವರು. ದೈಹಿಕ ಶಿಕ್ಷಣಾಧಿಕಾರಿ ಎಸ್.ಬಿ.ಚಲವಾದಿ, ಸ್ಕೌಟ್ಸ್ ಸಂಯೋಜಕ ಪ್ರೊ.ಎಸ್.ಎಸ್.ಹೂಗಾರ ಉಪಸ್ಥಿತರಿರುವರು.

### ಎಚ್‌ಐವಿಗೆ ಜಾಗೃತಿಯೇ ಪರಿಹಾರ:ಕಲ್ಲಣ

ಮುದ್ದೇಬಿಹಾಳ: ವಿಷ್ಣಂತ ಮಾರಕ ರೋಗಗಳು ನಾಗರಿಕ ಸಮಾಜಕ್ಕೆ ಅತೀ ಮಾರಕ ಇದರಿಂದ ನೈತಿಕತೆ ಮತ್ತು ಮೌಲ್ಯಗಳು ಅಧಃಪತನ ಆಗುವಂತಾಗಿದೆ ಆದ್ದರಿಂದ ವಿಷ್ಣ ರಹಿತ ಸಮಾಜವನ್ನು ನಿರ್ಮಿಸುವುದು ನಮ್ಮೆಲ್ಲರ ಹೊಣೆ ಎಂದು ತಾಲೂಕು ಕಾನೂನು ನೆರವು ಸಮಿತಿಯ ಅಧ್ಯಕ್ಷ, ಹಿರಿಯ ನ್ಯಾಯಾಧೀಶ ಎಸ್.ಎಸ್. ಕಲ್ಲಣ ಹೇಳಿದರು.

ತಾಲೂಕು ಕಾನೂನು ಸೇವಾ ಸಮಿತಿ ಹಾಗೂ ಶಿಶು ಮತ್ತು ಮಹಿಳಾ ಕಲ್ಯಾಣ ಇಲಾಖೆ ವತಿಯಿಂದ ಎಚ್‌ಐವಿ ಹಾಗೂ ಆರೋಗ್ಯ ಶಿಬಿರಗಳ ಕುರಿತು ಕಾನೂನು ನೆರವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

### ಇಂದಿನಿಂದ ಸೈಕಲ್ ಜಾಥಾ

ಮುದ್ದೇಬಿಹಾಳ: ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆ, ಎಂಜಿವಿಸಿ ಕಾಲೇಜು ಹಾಗೂ ನೇತಾಜಿ ಸುಭಾಷಚಂದ್ರ ಬೋಸ್ ರೋವರ್ಸ್ ವತಿಯಿಂದ ಸೆ.30ರಿಂದ ಅ.1 ರವರೆಗೆ ಸ್ಕೌಟ್ಸ್ ಚಳವಳಿಯ ಸೈಕಲ್ ಜಾಥಾ ತಾಲೂಕಿನ ನಾಲತವಾಡ ಹಾಗೂ ಮುದ್ದೇಬಿಹಾಳ ಹೋಬಳಿಗಳಲ್ಲಿ ಹಮ್ಮಿಕೊಳ್ಳಲಾಗಿದೆ. ಸೆ.30 ರಂದು ಬೆಳಗ್ಗೆ 8.30ಕ್ಕೆ ಸಿಪಿಐ ಸುದರ್ಶನ ಪಟ್ಟಣಕುಡೆ ಸೈಕಲ್ ಜಾಥಾಕ್ಕೆ ಚಾಲನೆ ನೀಡುವರು. ದೈಹಿಕ ಶಿಕ್ಷಣಾಧಿಕಾರಿ ಎಸ್.ಬಿ.ಚಲವಾದಿ, ಎಂಜಿವಿಸಿ ಕಾಲೇಜಿನ ಪ್ರಾಚಾರ್ಯ ಪ್ರೊ.ಎಸ್.ಜಿ.ನಂದಿ ಅಧ್ಯಕ್ಷತೆ ವಹಿಸುವರು. ಜಾಥಾ ಮುದ್ದೇಬಿಹಾಳ ಪಟ್ಟಣದಿಂದ ಆರಂಭಗೊಂಡು ತಾಲೂಕಿನ ಸರೂರ, ಕವಡಿಮಟ್ಟಿ, ಹಿರೇಮುರಾಳ, ಜಂಗಮುರಾಳ, ನಾಗರಬೆಟ್ಟ, ನಾಲತವಾಡ, ಅಯ್ಯನಗುಡಿ, ಬಿಜ್ಜೂರ, ಲೊಟಗೇರಿ, ಫಾಳಪೂಜ, ಬಲದಿನ್ನಿ ಮೂಲಕ ರಕ್ಕಸಗಿಯಲ್ಲಿ ವಾಸ್ತವ್ಯ ಹೂಡಲಿದೆ. ಅ.1 ರಂದು ರಕ್ಕಸಗಿಯಿಂದ ಕಪನೂರ, ಬಂಗಾರಗುಂಡ, ಗರಸಂಗಿ, ಯರಗಲ್, ಕೋಳೂರ, ಕೋಳೂರ ತಾಂಡಾ, ಮುದ್ನಾಳ ಮೂಲಕ ಮುದ್ದೇಬಿಹಾಳ ಪಟ್ಟಣಕ್ಕೆ ಆಗಮಿಸಲಿದೆ ಎಂದು ಜಿ.ಎಸ್.ಹೂಗಾರ ತಿಳಿಸಿದ್ದಾರೆ.

ಪದಾಧಿಕಾರಿಗಳ ಆಯ್ಕೆ

with, heard and decided in your absence.

Issued under my hand and seal of

### ಸೈಕಲ್ ಜಾಥಾಕ್ಕೆ ಸಿಪಿಐ ಚಾ...

ಮುದ್ದೇಬಿಹಾಳ: ತಾಲೂಕಿನ ನಾಲತವಾಡ ಹಾಗೂ ಮು... ಹೋಬಳಿಗಳಲ್ಲಿ ಎರಡು ದಿನಗಳವರೆಗೆ ಹಮ್ಮಿಕೊಂಡಿರುವ ಸ್ಕೌಟ್ಸ್ ... ಸೈಕಲ್ ಜಾಥಾಕ್ಕೆ ಸಿಪಿಐ ಸುದರ್ಶನ ಪಟ್ಟಣಕುಡೆ ಸೋಮವಾರ ಚಾಲ...

ಪಟ್ಟಣದ ಎಂಜಿವಿಸಿ ಕಾಲೇಜಿನ ಎದುರು ಸ್ಕೌಟ್ಸ್ ರೋವರ್‌ಗಳ ... ಹಸಿರು ನಿಶಾನೆ ತೋರುವ ಮೂಲಕ ಜಾಥಾಕ್ಕೆ ಚಾಲನೆ ನೀಡಲಾಯಿತು.

ದೈಹಿಕ ಶಿಕ್ಷಣಾಧಿಕಾರಿ ಎಸ್.ಬಿ.ಚಲವಾದಿ ಮಾತನಾಡಿ, ಪ್ರ... ಶಾಲೆಗಳಲ್ಲಿ ಸ್ಕೌಟ್ಸ್ ಯುನಿಟ್ ಆರಂಭಿಸಲು ಸರ್ಕಾರದ ನಿರ್ದೇಶನ ... ಅದರಂತೆ ಎಲ್ಲ ಶಾಲೆಗಳಲ್ಲಿ ಸ್ಕೌಟ್ಸ್ ವಿಭಾಗ ಆರಂಭಿಸಬೇಕು. ಇದಕ್ಕೆ ಸ... ಸ್ಕೌಟ್ಸ್ ಮಾಸ್ಟರ್ ಹಾಗೂ ಅಧಿಕಾರಿಗಳನ್ನು ಸಂಪರ್ಕಿಸಬೇಕು ಎಂದರು.

ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಪ್ರೊ.ಎಸ್.ಎಸ್... ಮಾತನಾಡಿದರು. ಎಂಜಿವಿಸಿ ಕಾಲೇಜಿನ ಪ್ರಾಚಾರ್ಯ ಪ್ರೊ.ಎಸ್... ಅಧ್ಯಕ್ಷತೆ ವಹಿಸಿದ್ದರು. ಸ್ಕೌಟ್ಸ್ ಕಾರ್ಯದರ್ಶಿ ಎ.ಕೆ.ಮುಲ್ಲಾ, ಪಿಜಾಂ... ಬಿ.ಬಂಗಾರಿ, ಸ್ಕೌಟ್ಸ್ ಮಾಸ್ಟರ್ ಜಿ.ಎಸ್.ಹೂಗಾರ ಮತ್ತಿತರರು ಇದ್ದರು.



REDMI NOTE 9 PRO

# M.G.V.C ARTS, COMMERCE AND SCIENCE COLLEGE, MUDDEBIHAL

## PRESS CLUB (PAPER CUTTINGS)



ಸ್ಕೌಟ್ಸ್ ಜಾಗೃತಿ...

**ಜಾಥಾ**

ಮುದ್ದೇಬಿಹಾಳ: ನಾಲತವಾಡ ಹಾಗೂ ಮುದ್ದೇಬಿಹಾಳ ಹೋಬಳಿಗಳ ಸ್ಕೌಟ್ಸ್ ಜಾಗೃತಿ ಜಾಥಾಕ್ಕೆ ಸಿಪಿಐ ಸುದರ್ಶನ ಪಟ್ಟಣಕುಡೆ ಚಾಲನೆ ನೀಡಿದರು.

-10-2013

### ಸ್ಕೌಟ್ಸ್ ಸೈಕಲ್ ಜಾಥಾಕ್ಕೆ ಚಾಲನೆ

ಮುದ್ದೇಬಿಹಾಳ: ಪಟ್ಟಣದ ಎಂಜಿವಿಸಿ ಕಾಲೇಜಿನ ಎದುರು ಹೋಬಳಿಗಳ ಮಟ್ಟದ ಸ್ಕೌಟ್ಸ್ ಸೈಕಲ್ ಜಾಥಾಕ್ಕೆ ಸಿಪಿಐ ಸುದರ್ಶನ ಪಟ್ಟಣಕುಡೆ ಹಸಿರು ನಿಶಾನೆ ತೋರುವ ಮೂಲಕ ಜಾಥಾಕ್ಕೆ ಚಾಲನೆ ನೀಡಿದರು. ತಾಲ್ಲೂಕಿನ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆ ಎಂಜಿವಿಸಿ ಕಾಲೇಜು ಹಾಗೂ ನೇತಾಜಿ ಸುಭಾಷಚಂದ್ರ ಭೋಸ್ ರೋವರ್ಸ್ ಸಂಯುಕ್ತಾಶ್ರಯದಲ್ಲಿ ಎರಡು ದಿನಗಳವರೆಗೆ ಹಮ್ಮಿಕೊಂಡಿರುವ ನಾಲತವಾಡ ಹಾಗೂ ಮುದ್ದೇಬಿಹಾಳ ಹೋಬಳಿಗಳ ಸ್ಕೌಟ್ಸ್ ಜಾಥಾಕ್ಕೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಎನ್ಎಸ್ಎಸ್ ಸಂಯೋಜನಾಧಿಕಾರಿ ಪ್ರೊ. ಎಸ್.ಎಸ್. ಹೂಗಾರ, 'ಇಂದಿನ ಯುವ ಪೀಳಿಗೆಯಲ್ಲಿ ಅವರು ತಮ್ಮ ಜೀವನದುದ್ದಕ್ಕೂ ಶಿಸ್ತು ಸಂಯಮದ ಜೀವನ ಹಾಗೂ ದೇಶಾಭಿಮಾನದ ಕುರಿತು ಜಾಗೃತಿ ಮೂಡಿಸಲು ಜಾಥಾಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು. ಅತಿಥಿಗಳಾಗಿದ್ದ ದೈಹಿಕ ಶಿಕ್ಷಣಾಧಿಕಾರಿ ಎಸ್.ಬಿ. ಚಲವಾದಿ ಮಾತನಾಡಿ, ಪ್ರತಿಯೊಂದು ಶಾಲೆಗಳಲ್ಲಿ ಸ್ಕೌಟ್ಸ್ ಟ್ರೂಪ್ ಆರಂಭಿಸಲು ಸರ್ಕಾರ ನಿರ್ದೇಶನ ನೀಡಿದೆ. ಅದರಂತೆ ಎಲ್ಲ ಶಾಲೆಗಳಲ್ಲಿ ಸ್ಕೌಟ್ಸ್ ವಿಭಾಗ ಆರಂಭಿಸಲಿದ್ದು ಇದಕ್ಕೆ ಸಂಬಂಧಿಸಿದ ಸ್ಕೌಟ್ಸ್ ಮಾಸ್ಟರ್ ಹಾಗೂ ಅಧಿಕಾರಿಗಳನ್ನು ಸಂಪರ್ಕಿಸಬೇಕು ಎಂದು ಹೇಳಿದರು.

ಎಂಜಿವಿಸಿ ಕಾಲೇಜಿನ ಪ್ರಾಚಾರ್ಯ ಪ್ರೊ. ಎಸ್.ಜಿ. ನಂದಿ ಅಧ್ಯಕ್ಷತೆ ವಹಿಸಿದ್ದರು. ಸ್ಕೌಟ್ಸ್ ಕಾರ್ಯದರ್ಶಿ ಎ.ಕೆ. ಮುಲ್ಲಾ, ... ಸ್ಕೌಟ್ಸ್ ಮಾಸ್ಟರ್ ...



# 'ಜೀವನದಲ್ಲಿ ಶಿಸ್ತು ರೂಢಿಸಿಕೊಳ್ಳಿ'

ಪ್ರಜಾವಾಣಿ ವಾರ್ತೆ

ಮುದ್ದೇಬಿಹಾಳ: ವಿದ್ಯಾರ್ಥಿಗಳು ಶಿಸ್ತು, ಕಾರ್ಯದಕ್ಷತೆ, ಸೇವಾ ಮನೋಭಾವನೆ, ಅಭಿಮಾನ ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಡಿ.ಗಾಂಜಿ ಹೇಳಿದರು.

ಪಟ್ಟಣದ ಸರ್ಕಾರಿ ಕನ್ನಡ ಗಂಡು ಮಕ್ಕಳ ಮಾದರಿ ಶಾಲೆಯಲ್ಲಿ ಶನಿವಾರ ನಡೆದ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಪದಗ್ರಹಣ, ದ್ವಿತೀಯ ಸೋಪಾನ ಪರೀಕ್ಷೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲ ಶಾಲೆಗಳಲ್ಲಿ ಸ್ಕೌಟ್ಸ್, ಗೈಡ್ಸ್ ಶಾಖೆ ಪ್ರಾರಂಭಿಸಿ ವಿದ್ಯಾರ್ಥಿಗಳಿಗೆ ಒಳ್ಳೆಯ ನೀತಿ ಮಾರ್ಗ ತಿಳಿಸುವಂತಾಗಬೇಕು ಎಂದು ಹೇಳಿದರು.

ಅಧ್ಯಕ್ಷ ಮುಸ್ತಾಧಣಿ ನಾಡಗೌಡ ಮಾತನಾಡಿ, ಇಷ್ಟು ದಿನ ಚಟುವಟಿಕೆ ರಹಿತವಾಗಿದ್ದ ಸ್ಕೌಟ್ಸ್, ಗೈಡ್ಸ್ ಈಗ ಹೊಸ ಹುಮ್ಮಸ್ಸಿನೊಂದಿಗೆ ಕ್ರಿಯಾಶೀಲಗೊಂಡಿದೆ. ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳ ಪ್ರಗತಿಗೆ ಹಲವಾರು ಯೋಜನೆ ಜಾರಿಗೊಳಿಸಲಾಗುತ್ತದೆ ಎಂದರು. ಇದೇ ವೇಳೆ ವಕೀಲ ಜೆ.ಎ.ಚಿನಿವಾರ, ಕಡುಬಡವ ವಿದ್ಯಾರ್ಥಿಗಳ ಸಮವಸ್ತ್ರಕ್ಕೆ ಎಂದು ದೇಣಿಗೆ ನೀಡುವುದಾಗಿ ಪ್ರಕಟಿಸಿದರು. ಭರತನಾಟ್ಯ ಪ್ರವೀಣ ಎ.ಕೆ.ಮುಲ್ಲಾ, ಡಿ.ಎಲ್.ಪಿಂಜಾರ ಅವರನ್ನು ಸನ್ಮಾನಿಸಲಾಯಿತು.

ಬಿಜೆಪಿ ಮುಖಂಡ ಶಿವಶಂಕರಗೌಡ ಹಿರೇಗೌಡರ, ಗಿರಿಜಾ ಕಡಿ, ಪರಶುರಾಮ ಕುಂಬಾರ ಮಾತನಾಡಿದರು.

ದೈಹಿಕ ಶಿಕ್ಷಣ ಪರಿವೀಕ್ಷಕ ಎಸ್.ಬಿ.ಚಲವಾದಿ, ಪ್ರಕಾಶ ಕಡಿ, ಬಸವರಾಜ ನಂದಿಕೇಶ್ವರಮಠ, ಮಹಿಬೂಬ ಮುಲ್ಲಾ, ಹಣಮಂತ್ರಾಯ ಬಿರಾದಾರ, ಜೆ.ಎಸ್.ಅಥಣಿ, ಪ್ರೊ.ಎಸ್.ಎಸ್.ಹೂಗಾರ, ದತ್ತಾತ್ರೇಯ ಕಠಾರೆ, ಪ್ರೊ.ಎಸ್.ಎಸ್.ಹೂಗಾರ, ಡಿ.ಬಿ.ವಡವಡಗಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಎಲ್.ಕೆ.ನದಾಫ್ ಸ್ವಾಗತಿಸಿದರು. ಜೆ.ಎಸ್.ಹೂಗಾರ ನಿರೂಪಿಸಿದರು. ... ವಂದಿಸಿದರು.

ಮುದ್ದೇಬಿಹಾಳದ ಸರ್ಕಾರಿ ಕನ್ನಡ ಗಂಡುಮಕ್ಕಳ ಮಾದರಿ ಶಾಲೆಯಲ್ಲಿ ನಡೆದ ಭಾರತ ಸ್ಕೌಟ್ ಮತ್ತು ಗೈಡ್ ಪದಗ್ರಹಣ, ದ್ವಿತೀಯ ಸೋಪಾನ ಪರೀಕ್ಷೆ ಕಾರ್ಯಕ್ರಮ ಬಿಇಒ ಎಸ್.ಡಿ.ಗಾಂಜಿ ಉದ್ಘಾಟಿಸಿದರು

## M.G.V.C ARTS, COMMERCE AND SCIENCE COLLEGE, MUDDEBIHAL

## PRESS CLUB (PAPER CUTTINGS)






# M.G.V.C ARTS, COMMERCE AND SCIENCE COLLEGE, MUDDEBIHAL

## PRESS CLUB (PAPER CUTTINGS)

ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮ

### ಸಂಚಾರ ನಿಯಮ ಪಾಲನೆಗೆ ಡಿವೈಎಸ್‌ಪಿ ಸೂಚನೆ



Pg 17

Gulbarga edition, Jan 14, 2020

450+ Newspapers | 18 Languages

Udayavani

paper

---

ದಿನಾಂಕ : 18-01-2020 ಈ ದಿವಸ ಕನ್ನಡ ದಿನ ಪತ್ರಿಕೆ

### ಅಪರಾಧ ತಡೆಗಟ್ಟುವುದು, ಶಿಕ್ಷೆ ಕೊಡಿಸುವುದು, ಕಾನೂನು ಸುವ್ಯವಸ್ಥೆ ಕಾಪಾಡುವುದು ಪೊಲೀಸರ ಮುಖ್ಯ ಕರ್ತವ್ಯ

ಮುದ್ದೇಬಿಹಾಳ: ಅಪರಾಧ ತಡೆಗಟ್ಟುವುದು, ಶಿಕ್ಷೆ ಕೊಡಿಸುವುದು, ಕಾನೂನು ಸುವ್ಯವಸ್ಥೆ ಕಾಪಾಡುವುದು ಪೊಲೀಸರ ಮುಖ್ಯ ಕರ್ತವ್ಯಗಳಾಗಿರುತ್ತವೆ. ತಮ್ಮ ಅಕ್ಕಪಕ್ಕ ನಡೆಯುವ ಅಪರಾಧ ತಡೆಗಟ್ಟಲು ಪ್ರತಿಯೊಬ್ಬ ವಿದ್ಯಾರ್ಥಿ, ನಾಗರಿಕ ಸ್ವಯಂಪ್ರೇರಿತ ಪೊಲೀಸ್ ಆಗಬೇಕು. ಅಪರಾಧ' ತಡೆಗಟ್ಟುವ ಪ್ರಕ್ರಿ ವಿದ್ಯಾರ್ಥಿಗಳು, ಯುವಜನತೆಯಿಂದಲೇ ಪ್ರಾರಂಭಗೊಳ್ಳಬೇಕು ಎಂದು ಬಸವನ ಬಾಗೇವಾಡಿ ಡಿಎಸ್ಪಿ ಈ ಶಾಂತವೀರ ಹೇಳಿದ್ದಾರೆ.



ಇಲ್ಲಿನ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮುದ್ದೇಬಿಹಾಳ ಸ್ಥಳೀಯ ಸಂಸ್ಥೆ, ಕ್ಷೇತ್ರ ಶಿಕ್ಷಣಾಧಿಕಾರಿ, ಕ್ಷೇತ್ರ ಸಮನ್ವಯಾಧಿಕಾರಿ ಕಾರ್ಯಾಲಯ ಸಹಯೋಗದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಪುಟಾಣಿ ಪೊಲೀಸ್-ಒಂದು ದಿನದ ವಿಶೇಷ ಶಿಬಿರದ ಮುಖ್ಯ ಅತಿಥಿಯಾಗಿ ಅವರು ಮಾತನಾಡುತ್ತಿದ್ದರು.

ಸ್ಕೌಟ್ಸ್, ಗೈಡ್ಸ್ ಸೇವಾರ್ಥಿಗಳು ತಾವು ಬೇರೆಯವರಿಗಿಂತ ವಿಶೇಷ, ಶಿಸ್ತಿನ ಸಿಪಾಯಿ ಎನ್ನುವ ಪರಿಕಲ್ಪನೆ ಹೊಂದಿರಬೇಕು. ಧೈರ್ಯ, ಪ್ರಾಮಾಣಿಕತೆ, ಶಿಸ್ತು, ಏಕಾಗ್ರತೆ ಮೈಗೂಡಿಸಿಕೊಳ್ಳಬೇಕು. ...ಲಕರು ತಮ್ಮ ಮಕ್ಕಳನ್ನು ಸ್ಕೌಟ್ ಗೈಡ್‌ಗೆ ಸೇರಿಸಬೇಕು. ಇದರಿಂದ ನಿತ್ಯದ ಓದಿಗೆ ಯಾವುದೇ ತೊಂದರೆ ಆಗುವುದಿಲ್ಲ. ವಿದ್ಯಾರ್ಥಿಗಳು, ಯುವಜನತೆ ದೇಶಭಕ್ತಿ ಮೈಗೂಡಿಸಿಕೊಳ್ಳಬೇಕು. ಸ್ವಾಮಿ ವಿವೇಕಾನಂದರ ಬಾಲ್ಯದ ಜೀವನ ಓದಿ ಅನುಸರಿಸಬೇಕು. ವಿದ್ಯೆ ಕಲಿಸಿದ ಗುರುಗಳನ್ನು ಮರೆಯಬಾರದು. ವಿದ್ಯಾರ್ಥಿ ಜೀವನದಲ್ಲಿ ಮೊಬೈಲ್, ವಾಟ್ಸಪ್ ಬಿಟ್ಟು ಪುಸ್ತಕ ಪ್ರೀತಿಸುವುದನ್ನು ಕಲಿಯಬೇಕು ಎಂದು ಕಿವಿಮಾತು ಹೇಳಿದರು.

ನಿವೃತ್ತ ದೈಹಿಕ ಶಿಕ್ಷಣಾಧಿಕಾರಿ ಎಸ್.ಬಿ.ಚಲವಾದಿ, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಡಿ.ಗಾಂಜಿ, ಬಿಜೆಪಿ ಧುರೀಣ ಮಲಕೇಂದ್ರಗೌಡ ಪಾಟೀಲ, ಅಧ್ಯಕ್ಷತೆ ವಹಿ...ಸ್ಥಳೀಯ ಸಂಸ್ಥೆ ಉಪಾಧ್ಯಕ್ಷ ಡಿ.ಬಿ.ವಡವಡಗಿ ಮಾತನಾಡಿದರು. ಜಿಲ್ಲಾ ಸಂಸ್ಥೆಯ ರಾಜ್ಯ ಸಹಾಯಕ ಆಯುಕ್ತ ನಾಗೇಶ ಶಿವಪುರ, ದೈಹಿಕ ಶಿಕ್ಷಣ ಪರಿವೀಕ್ಷಕ ಎಚ್.ಎಲ್.ಕರಡ್ಡಿ, ಸಿಪಿಐ ಆನಂದ ವಾಗಮೋಡೆ, ಪಿಎಸೈ ಮಲ್ಲಪ್ಪ ಮಡ್ಡಿ, ಸಂಸ್ಥೆ ನಿಕಟಪೂರ್ವ ಕಾರ್ಯದರ್ಶಿ ದತ್ತಾತ್ರೇಯ ಕಠಾರೆ ವೇದಿಕೆಯಲ್ಲಿದ್ದರು.

ಡಿ.ಬಿ.ವಡವಡಗಿ ಸ್ವಾಗತಿಸಿದರು. ಸಂಸ್ಥೆ ಚೇರ್ಮನ್ ಪ್ರೊ.ಎಸ್.ಎಸ್.ಹೂಗಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಸ್ಥೆ ಖಜಾಂಚಿ ಜೆ.ಎಸ್.ಹೂಗಾರ ನಿರೂಪಿಸಿದರು. ಸಂಸ್ಥೆ ಕಾರ್ಯದರ್ಶಿ ಜೆ.ಎಚ್.ಚವ್ಹಾಣ ವಂದಿಸಿದರು.

ಸ್ಕೌಟ್ಸ್ ಗೈಡ್ಸ್ ಧ್ವಜಾರೋಹಣ ಮೂಲಕ ಶಿಬಿರಕ್ಕೆ ಚಾಲನೆ ನೀ...ಲಾಯಿತು. ಕಾರ್ಯಕ್ರಮದ ನಂತರ ಪೊಲೀಸ್ ಠಾಣೆ ಕಾರ್ಯನಿರ್ವಹಣೆ, ಕಾನೂನು, ವಿವಿಧ ವಿಭಾಗಗಳ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡಲಾಯಿತು.

**ಜಾಥಾಕ್ಕೆ ಚಾಲನೆ:**

ಶಿಬಿರಕ್ಕೂ ಮುನ್ನ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯಿಂದ ಪೊಲೀಸ್ ಠಾಣೆವರೆಗೆ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಜಾಥಾ ನಡೆಸಿದರು. ತಹಸೀಲ್ದಾರ್ ಜಿ.ಎಸ್.ಮಳಗಿ, ಬಿಇಒ ಎಸ್.ಡಿ.ಗಾಂಜಿ ಜಂಟಿಯಾಗಿ ಹಸಿರು ನಿಶಾನೆ ತೋರಿಸುವ ಮೂಲಕ ಜಾಥಾಕ್ಕೆ ಚಾಲನೆ ನೀಡಿದರು. ತಾಲೂಕು ಪಂಚಾಯಿತಿ ವ್ಯವಸ್ಥಾಪಕಿ ಸರೋಜಾ ಅವಟಿ, ಎಂಜಿಎಂಕೆ ಶಿಕ್ಷಕ ಉಮೇಶ ತಾರನಾಳ, ಸ್ಕೌಟ್ಸ್, ಗೈಡ್ಸ್ ತರಬೇತುದಾರರು ಪಾಲ್ಗೊಂಡಿದ್ದರು.

PRINCIPAL,
M.G.V.C. Arts, Com. & Science College
MUDDEBIHAL - 586212

# M.G.V.C ARTS, COMMERCE AND SCIENCE COLLEGE, MUDDEBIHAL

## PRESS CLUB (PAPER CUTTINGS)

### ಅಪರಾಧ ತಡೆಗೆ ವಿದ್ಯಾರ್ಥಿಗಳೂ ಪೊಲೀಸರಾಗಿ

PRINCIPAL, M.G.V.C. Arts, Com. & Sc. College, MUDDEBIHAL - 586212.



ಮುದ್ದೇಬಿಹಾಳ,ಜ.18- ಅಪರಾಧ ತಡೆಗಟ್ಟುವುದು, ಶಿಕ್ಷೆ ಕೊಡಿಸುವುದು, ಕಾನೂನು ಸುವ್ಯವಸ್ಥೆ ಕಾಪಾಡುವುದು ಪೊಲೀಸರ ಮುಖ್ಯ ಕರ್ತವ್ಯ. ತಮ್ಮ ಅಕ್ಕ-ಪಕ್ಕ ನಡೆಯುವ ಅಪರಾಧ ತಡೆಗಟ್ಟಲು ಪ್ರತಿಯೊಬ್ಬ ವಿದ್ಯಾರ್ಥಿ, ನಾಗರಿಕ ಸ್ವಯಂಪ್ರೇರಿತ ಪೊಲೀಸ್ ಆಗಬೇಕು. ಅಪರಾಧ ತಡೆಗಟ್ಟುವ ಪ್ರಜ್ಞೆ ವಿದ್ಯಾರ್ಥಿಗಳು, ಯುವಜನತೆಯಿಂದಲೇ ಪ್ರಾರಂಭಗೊಳ್ಳಬೇಕು ಎಂದು ಬಸವನ ಬಾಗೇವಾಡಿ ಡಿವೈಎಸ್‌ಪಿ ಶಾಂತವೀರ ಹೇಳಿದ್ದಾರೆ.

ಪೊಲೀಸ್ ಠಾಣೆಯಲ್ಲಿ ಭಾರತ ಸ್ಕೌಟ್ ಮತ್ತು ಗೈಡ್ಸ್‌ನ ಸ್ಥಳೀಯ ಸಂಸ್ಥೆ, ಕ್ಷೇತ್ರ ಶಿಕ್ಷಣಾಧಿಕಾರಿ, ಕ್ಷೇತ್ರ ಸಮನ್ವಯಾಧಿಕಾರಿ ಕಾರ್ಯಾಲಯ ಸಹಯೋಗದಲ್ಲಿ ಸ್ಕೌಟ್ ಮತ್ತು ಗೈಡ್ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಪುಟಾಣಿ ಪೊಲೀಸ್- ಒಂದು ದಿನದ ವಿಶೇಷ ಶಿಬಿರದಲ್ಲಿ ಅವರು ಮಾತನಾಡಿ, ಸ್ಕೌಟ್, ಗೈಡ್ ಸೇವಾರ್ಥಿಗಳು ತಾವು ಬೇರೆಯವರಿಗಿಂತ ವಿಶೇಷ, ಶಿಸ್ತಿನ ಸಿಪಾಯಿ ಎನ್ನುವ ಮನಃಸ್ಥಿತಿ ಹೊಂದಿರಬೇಕು. ಧೈರ್ಯ, ಪ್ರಾಮಾಣಿಕತೆ, ಶಿಸ್ತು, ಏಕಾಗ್ರತೆ ಮೈಗೂಡಿಸಿಕೊಳ್ಳಬೇಕು. ಪಾಲಕರು ತಮ್ಮ ಮಕ್ಕಳನ್ನು ಸ್ಕೌಟ್ ಗೈಡ್ಸ್‌ಗೆ [illegible]ಬೇಕು. ಇದರಿಂದ ನಿತ್ಯದ ಓದಿಗೆ ಯಾವುದೇ ತೊಂದರೆ ಆಗುವುದಿಲ್ಲ. ವಿದ್ಯಾರ್ಥಿಗಳು, ಯುವಜನತೆ ದೇಶಭಕ್ತಿ ಮೈಗೂಡಿಸಿಕೊಳ್ಳಬೇಕು. ಸ್ವಾಮಿ ವಿವೇಕಾನಂದರ ಬಾಲ್ಯದ ಜೀವನ ಓದಿ ಅನುಸರಿಸಬೇಕು. ವಿದ್ಯೆ ಕಲಿಸಿದ ಗುರುಗಳನ್ನು ಮರೆಯಬಾರದು. ವಿದ್ಯಾರ್ಥಿ ಜೀವನದಲ್ಲಿ ಮೊಬೈಲ್, ವಾಟ್ಸಪ್ ಬಿಟ್ಟು ಪುಸ್ತಕ ಪ್ರೀತಿಸುವುದನ್ನು ಕಲಿಯಬೇಕು ಎಂದು ಕಿವಿಮಾತು ಹೇಳಿದರು.

> ಸ್ಕೌಟ್ ಮತ್ತು ಗೈಡ್ಸ್‌ನಲ್ಲಿ ಅತ್ಯುತ್ತಮ ಕೆಲಸ ಮಾಡಿ ಪುಟಾಣಿ ಪೊಲೀಸ್ ಎಂದು ಆಯ್ಕೆಯಾಗುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ಥಳೀಯ ಪೊಲೀಸ್ ಠಾಣೆಯಿಂದ ಪ್ರಶಸ್ತಿ ಪತ್ರ ನೀಡಿ ಫೆಬ್ರವರಿಯಲ್ಲಿ ನಡೆಯುವ ಸ್ಕೌಟ್ ಜನಕ ಬೇಡನ್ ಪೋವೆಲ್ ಜನ್ಮದಿನದಂದು ಸನ್ಮಾನಿಸಲಾಗುತ್ತದೆ.
>
> -ಈ. ಶಾಂತವೀರ, ಡಿವೈಎಸ್ಪಿ, ಬಸವನ ಬಾಗೇವಾಡಿ.

ನಿವೃತ್ತ ದೈಹಿಕ ಶಿಕ್ಷಣಾಧಿಕಾರಿ ಎಸ್.ಬಿ. ಚಲವಾದಿ, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಡಿ. ಗಾಂಜಿ, ಬಿಜೆಪಿ ಧುರೀಣ ಮಲಕೇಂದ್ರಗೌಡ ಪಾಟೀಲ, ಸಂಸ್ಥೆ ಉಪಾಧ್ಯಕ್ಷ ಡಿ.ಬಿ. ವಡವಡಗಿ, ಜಿಲ್ಲಾ ಸಂಸ್ಥೆಯ ರಾಜ್ಯ ಸಹಾಯಕ ಆಯುಕ್ತ ನಾಗೇಶ ಶಿವಪೂರ, ದೈಹಿಕ ಶಿಕ್ಷಣ ಪರಿವೀಕ್ಷಕ ಎಚ್.ಎಲ್. ಕರಡ್ಡಿ, ಸಿಪಿಐ ಆನಂದ ವಾಗಮೋಡೆ, ಪಿಎಸ್ಐ ಮಲ್ಲಪ್ಪ ಮಡ್ಡಿ, ಸಂಸ್ಥೆ ನಿಕಟಪೂರ್ವ ಕಾರ್ಯದರ್ಶಿ ದತ್ತಾತ್ರೇಯ ಕಠಾರೆ, ಡಿ.ಬಿ. ವಡವಡಗಿ, ಸಂಸ್ಥೆ ಚೇರ್‌ಮನ್ ಪ್ರೊ. ಎಸ್.ಎಸ್. ಹೂಗಾರ, ಸಂಸ್ಥೆ ಖಜಾಂಚಿ ಜಿ.ಎಸ್. ಹೂಗಾರ, ಸಂಸ್ಥೆ ಕಾರ್ಯದರ್ಶಿ ಜೆ.ಎಚ್. ಚವ್ಹಾಣ ಮುಂತಾದವರಿದ್ದರು. ಸ್ಕೌಟ್, ಗೈಡ್ ಧ್ವಜಾರೋಹಣ ಮೂಲಕ ಶಿಬಿರಕ್ಕೆ ಚಾಲನೆ ನೀಡಲಾಯಿತು. ಕಾರ್ಯಕ್ರಮದ ನಂತರ ಪೊಲೀಸ್ ಠಾಣೆ ಕಾರ್ಯನಿರ್ವಹಣೆ, ಕಾನೂನು, ವಿವಿಧ ವಿಭಾಗಗಳ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡಲಾಯಿತು.

ಶಿಬಿರಕ್ಕೂ ಮುನ್ನ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯಿಂದ ಪೊಲೀಸ್ ಠಾಣೆವರೆಗೆ ಸ್ಕೌಟ್ ಮತ್ತು ಗೈಡ್ ಮಕ್ಕಳು ಜಾಥಾ ನಡೆಸಿದರು. ತಹಸೀಲ್ದಾರ್ ಜಿ.ಎಸ್. ಮಳಗಿ, ಬಿಇಒ ಎಸ್.ಡಿ. ಗಾಂಜಿ ಜಂಟಿಯಾಗಿ ಹಸಿರು ನಿಶಾನೆ ತೋರಿಸುವ ಮೂಲಕ ಜಾಥಾಕ್ಕೆ ಚಾಲನೆ ನೀಡಿದರು. ಶಾಸಂ ವ್ಯವಸ್ಥಾಪಕ ಸರೋಜಾ ಅವಟಿ, ಎಂಜಿಎಂಕೆ ಶಿಕ್ಷಕ ಉಮೇಶ ಹಾರಿವಾಳ, ಸ್ಕೌಟ್, ಗೈಡ್ ತರಬೇತುದಾರರು ಇದ್ದರು.



---

ಶನಿವಾರ 18 ಜನವರಿ 2020 ಹೊಸ

### ಅಪರಾಧ ತಡೆಗಟ್ಟುವ ಪ್ರಜ್ಞೆ ಬೆಳೆಯಲಿ

ಮುದ್ದೇಬಿಹಾಳ: ಅಪರಾಧ ತಡೆಗಟ್ಟುವುದು, ಶಿಕ್ಷೆ ಕೊಡಿಸುವುದು, ಕಾನೂನು ಸುವ್ಯವಸ್ಥೆ ಕಾಪಾಡುವುದು ಪೊಲೀಸರ ಮುಖ್ಯ ಕರ್ತವ್ಯಗಳಾಗಿರುತ್ತವೆ. [illegible]



# M.G.V.C ARTS, COMMERCE AND SCIENCE COLLEGE, MUDDEBIHAL

## PRESS CLUB (PAPER CUTTINGS)

# ಅಪರಾಧ ತಡೆಗಟ್ಟಲು ಪ್ರತಿಯೊಬ್ಬರೂ ಪ್ರಯತ್ನಿಸಿ: ಶಾಂತವೀರ

## ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಪುಟಾಣಿ ಪೊಲೀಸ್–ಒಂದು ದಿನದ ವಿಶೇಷ ಶಿಬಿರದಲ್ಲಿ ಡಿವಿಸ್ಪಿ ಸಲಹೆ



ಮುದ್ದೇಬಿಹಾಳ: ಅಪರಾಧ ತಡೆಗಟ್ಟುವುದು, ಶಿಕ್ಷೆ ಕೊಡಿಸುವುದು, ಕಾನೂನು ಸುವ್ಯವಸ್ಥೆ ಕಾಪಾಡುವುದು ಪೊಲೀಸರ ಮುಖ್ಯ ಕರ್ತವ್ಯಗಳಾಗಿರುತ್ತವೆ. ತಮ್ಮ ಅಕ್ಕಪಕ್ಕ ನಡೆಯುವ ಅಪರಾಧ ತಡೆಗಟ್ಟಲು ಪ್ರತಿಯೊಬ್ಬ ವಿದ್ಯಾರ್ಥಿ, ನಾಗರಿಕ ಸ್ವಯಂ ಪ್ರೇರಿತ ಪೊಲೀಸ್ ಆಗಬೇಕು. ಅಪರಾಧ ತಡೆಗಟ್ಟುವ ಪ್ರಜ್ಞೆ ವಿದ್ಯಾರ್ಥಿಗಳು, ಯುವ ಜನತೆಯಿಂದಲೇ ಪ್ರಾರಂಭಗೊಳ್ಳಬೇಕು ಎಂದು ಬಸವನ ಬಾಗೇವಾಡಿ ಡಿವಿಸ್ಪಿ ಈ ಶಾಂತವೀರ ಹೇಳಿದ್ದಾರೆ.

ಇಲ್ಲಿನ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮುದ್ದೇಬಿಹಾಳ ಸ್ಥಳೀಯ ಸಂಸ್ಥೆ, ಕ್ಷೇತ್ರ ಶಿಕ್ಷಣಾಧಿಕಾರಿ, ಕ್ಷೇತ್ರ ಸಮನ್ವಯಾಧಿಕಾರಿ ಕಾರ್ಯಾಲಯ ಸಹಯೋಗದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಪುಟಾಣಿ ಪೊಲೀಸ್–ಒಂದು ದಿನದ ವಿಶೇಷ ಶಿಬಿರದ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು.

ಸ್ಕೌಟ್ಸ್, ಗೈಡ್ಸ್ ಸೇವಾರ್ಥಿಗಳು ಶಾಲಾ ದೇಶಿಯವರಿಗಿಂತ ವಿಶೇಷ, ಶಿಸ್ತಿನ ಸಿಪಾಯಿ ಎನ್ನುವ ಪರಿಕಲ್ಪನೆ ಹೊಂದಿರಬೇಕು. ಧೈರ್ಯ, ಪ್ರಾಮಾಣಿಕತೆ, ಶಿಸ್ತು, ಏಕಾಗ್ರತೆ ಮೈಗೂಡಿಸಿಕೊಳ್ಳಬೇಕು. ಪಾಲಕರು ತಮ್ಮ ಮಕ್ಕಳನ್ನು ಸ್ಕೌಟ್ ಗೈಡ್‌ಗೆ ಸೇರಿಸಬೇಕು. ಇದರಿಂದ ಸಿಕ್ಕಿದ ಓದಿಗೆ ಯಾವುದೇ ತೊಂದರೆ ಆಗುವುದಿಲ್ಲ. ವಿದ್ಯಾರ್ಥಿಗಳು, ಯುವಜನತೆ ದೇಶಭಕ್ತಿ ಮೈಗೂಡಿಸಿಕೊಳ್ಳಬೇಕು. ಸ್ವಾಮಿ ವಿವೇಕಾನಂದರ ಬಾಲ್ಯದ ಜೀವನ ಓದಿ ಅನುಸರಿಸಬೇಕು. ವಿದ್ಯೆ ಕಲಿಸಿದ ಗುರುಗಳನ್ನು ಮರೆಯಬಾರದು. ವಿದ್ಯಾರ್ಥಿ ಜೀವನದಲ್ಲಿ ಮೊಬೈಲ್, ವಾಟ್ಸಪ್ ಬಿಟ್ಟು ಪುಸ್ತಕ ಪ್ರೀತಿಸುವುದನ್ನು ಕಲಿಯಬೇಕು ಎಂದು ಕಿವಿಮಾತು ಹೇಳಿದರು.

ನಿವೃತ್ತ ದೈಹಿಕ ಶಿಕ್ಷಣಾಧಿಕಾರಿ ಎಸ್.ಪಿ. ಚಲವಾದಿ, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಡಿ. ಗಾಂಜಿ, ಬಿಜೆಪಿ ಧುರೀಣ ಮಲಕೇಂದ್ರಗೌಡ ಪಾಟೀಲ, ಅಧ್ಯಕ್ಷತೆವಹಿಸಿದ್ದ ಸ್ಥಳೀಯ ಸಂಸ್ಥೆ ಉಪಾಧ್ಯಕ್ಷ ಡಿ.ಬಿ.ವಡವಡಗಿ ಮಾತನಾಡಿದರು. ಜಿಲ್ಲಾ ಸಂಸ್ಥೆಯ ರಾಜ್ಯ ಸಹಾಯಕ ಆಯುಕ್ತ ನಾಗೇಶ ಶಿವಪುರ, ದೈಹಿಕ ಶಿಕ್ಷಣ ಪರಿವೀಕ್ಷಕ ಎಚ್.ಎಲ್.ಕರಡ್ಡಿ, ಸಿಪಿಐ ಆನಂದ ವಾಗಮೋರೆ, ಪಿಎಸ್ಐ ಮಲ್ಲಪ್ಪ ಮಡ್ಡಿ, ಸಂಸ್ಥೆ ನಿಕಟಪೂರ್ವ ಕಾರ್ಯದರ್ಶಿ ದತ್ತಾತ್ರೇಯ ಕಠಾರೆ ವೇದಿಕೆಯಲ್ಲಿದ್ದರು.

ಡಿ.ಬಿ.ವಡವಡಗಿ ಸ್ವಾಗತಿಸಿದರು. ಸಂಸ್ಥೆ ಚೇರ್ಮನ್ ಪ್ರೊ.ಎಸ್.ಎಸ್.ಹೂಗಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಸ್ಥೆ ಖಜಾಂಚಿ ಜಿ.ಎಸ್.ಹೂಗಾರ ನಿರೂಪಿಸಿದರು. ಸಂಸ್ಥೆ ಕಾರ್ಯದರ್ಶಿ ಜೆ.ಎಚ್. ಚವ್ಹಾಣ ವಂದಿಸಿದರು.

ಸ್ಕೌಟ್ಸ್ ಗೈಡ್ಸ್ ಧ್ವಜಾರೋಹಣ ಮೂಲಕ ಶಿಬಿರಕ್ಕೆ ಚಾಲನೆ ನೀಡಲಾಯಿತು. ಕಾರ್ಯಕ್ರಮದ ನಂತರ ಪೊಲೀಸ್ ಠಾಣೆ ಕಾರ್ಯ ನಿರ್ವಹಣೆ, ಕಾನೂನು, ವಿವಿಧ ವಿಭಾಗಗಳ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡಲಾಯಿತು.

**ಜಾಥಾಕ್ಕೆ ಚಾಲನೆ**

ಶಿಬಿರಕ್ಕೂ ಮುನ್ನ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯಿಂದ ಪೊಲೀಸ್ ಠಾಣೆವರೆಗೆ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಜಾಥಾ ನಡೆಸಿದರು. ತಹಸೀಲ್ದಾರ್ ಜಿ.ಎಸ್.ಮಳಗಿ, ಬಿಇಒ ಎಸ್.ಡಿ.ಗಾಂಜಿ ಜಂಟಿಯಾಗಿ ಹಸಿರು ನಿಶಾನೆ ತೋರಿಸುವ ಮೂಲಕ ಜಾಥಾಕ್ಕೆ ಚಾಲನೆ ನೀಡಿದರು. ತಾಲೂಕು ಪಂಚಾಯಿತಿ ವ್ಯವಸ್ಥಾಪಕ ಸರೋಜಾ ಆವಟಿ, ಎಂಜಿಎಂಕೆ ಶಿಕ್ಷಕ ಉಮೇಶ ಶಾರದಾಳ, ಸ್ಕೌಟ್ಸ್, ಗೈಡ್ಸ್ ತರಬೇತುದಾರರು ಪಾಲ್ಗೊಂಡಿದ್ದರು.

■ ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿ ಅತ್ಯುತ್ತಮ ಕೆಲಸ ಮಾಡಿ ಪುಟಾಣಿ ಪೊಲೀಸ್ ಎಂದು ಆಯ್ಕೆ ಆಗುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ಥಳೀಯ ಪೊಲೀಸ್ ಠಾಣೆಯಿಂದ ಪ್ರಶಸ್ತಿ ಪತ್ರ ನೀಡಿ ಫೆಬ್ರವರಿಯಲ್ಲಿ ನಡೆಯುವ ಸ್ಕೌಟ್ಸ್ ಜನಕ ಬೆಡೆನ್ ಪೋವೆಲ್ ಜನ್ಮದಿನದಂದು ಸನ್ಮಾನಿಸಲಾಗುತ್ತದೆ.

–ಈ.ಶಾಂತವೀರ, ಡಿವೈಎಸ್ಪಿ, ಬಸವನ ಬಾಗೇವಾಡಿ

---

ಜಾಗೃತಿ ರ‍್ಯಾಲಿಗೆ ಚಾಲನೆ

# ಸ್ವಯಂ ಜಾಗೃತಿಯಿಂದ ಕೋವಿಡ್ ನಿಗ್ರಹ

## ■ ಸರ್ಕಾರದ ಮಾರ್ಗಸೂಚಿ ಕಡ್ಡಾಯವಾಗಿ ಪಾಲಿಸಲು ನ್ಯಾಯಾಧೀಶರ ಸಲಹೆ



ಮುದ್ದೇಬಿಹಾಳ: ಜನ ಆಂದೋಲನ ಜಾಥಾಕ್ಕೆ ನ್ಯಾ। ಕೆ.ಪಿ. ಚಿಂತಾ ಚಾಲನೆ ನೀಡಿದರು.

[illegible]

M.G.V.C ARTS, COMMERCE AND SCIENCE COLLEGE, MUDDEBIHAL

PRESS CLUB (PAPER CUTTINGS)

**M.G.V.C ARTS, COMMERCE AND SCIENCE COLLEGE, MUDDEBIHAL**

**PRESS CLUB (PAPER CUTTINGS)**